ಅಪರಂಜಿ

ಜನವರಿ

1991


ತಿಳಿನಗೆಯ ಕಾರಂಜಿ



* ಪ್ರಕಾಶ್
* ಆರತಿ
* ಲೀಲಾ ಮಿರ್ಲೆ
* ಅ. ರಾ. ಮಿತ್ರ
* ಹರಿಹರೇಶ್ವರ
* ಶಿವು
* ಕೊಳ್ಳೇಗಾಲದ್ವಾ ರಾಮಾನುಜ
* ಶಿವು
* ಶಾಂತಾ ರಘು
* ಸೀನ
* ಅ. ರಾ. ಸೇ.

ಬಿಡಿ ಪ್ರತಿ : 2 ರೂ. 50 ಪೈ.

ಶುಭಾಶಯಗಳೊಂದಿಗೆ



ಎಸ್. ವಿ. ಆರ್. ಏಜೆನ್ಸೀಸ್

ಬೆಂಗಳೂರು



ಸಂಪುಟ ೮ ಜನವರಿ ೧೯೯೧ ಸಂಚಿಕೆ ೪

ಭಾಷಣಕಾರ

ಕೊರೆವ ಯಂತ್ರಕೆ ನೆಲದ ತಳದಲಿ
ಹರಿಯುವೆಣ್ಣೆಯು ಐದು ನಿಮಿಷಕೆ
ದೊರೆಯದಿದ್ದರೆ ಕೊರೆವುದನ್ನೇ ನಿಲಿಸಿ ನಡೆಯುವರು।
ನೆರೆದ ಸಭಿಕರ ಕಿವಿಯ ತಳದಲಿ
ಕೊರೆವ ಭಾಷಣಕಾರ ಜನರಿಗೆ
ಬರದು ಏಕೋ ಯಂತ್ರ ಬುದ್ಧಿಯು ಏನು ಮಾಡುವುದು॥

— ಛಂದೋಮಿತ್ರ

ಗೌರವ ಸಲಹೆಗಾರರು : ಶ್ರೀ ಅ. ರಾ. ಸೇ. ಶ್ರೀ ಶೇಷಗಿರಿ ಸಂಪಾದಕ : **ಶಿವಕುಮಾರ್**	ಚಂದಾ ವಿವರ : ಬಿಡಿ ಪ್ರತಿ : 2 ರೂ. 50 ಪೈ. ವಾರ್ಷಿಕ ಚಂದಾ : 25 ರೂ. ಆಜೀವ ಚಂದಾ : 2-50 ರೂ.	ವಿಳಾಸ : ಅಪರಂಜಿ ಕಾರ್ಯಾಲಯ 36, 6ನೆಯ ಮುಖ್ಯ ರಸ್ತೆ ಮಲ್ಲೇಶ್ವರಂ ಬೆಂಗಳೂರು 560003 ಕೆಲಸದ ವೇಳೆ : ಬೆಳಗ್ಗೆ 8ರಿಂದ 10 ಗಂಟೆಯ ವರೆಗೆ

ಈ ಸಂಚಿಕೆಯಲ್ಲಿ

ಲೇಖನ	ಲೇಖಕ/ಲೇಖಕಿ	ಪುಟ
ಅಪರಂಜಿ ಕಿಡಿ	ಪ್ರಕಾಶ್	4
ಹೊಸಗನ್ನಡಕ್ಕೆ ಹೊಸ ಪದಗಳು	ಆರತಿ	7
ರಸಯಾತ್ರ	ಲೀಲಾ ಮಿರ್ಲೆ	9
ಗಂಡನಿಗೆ	ಅ. ರಾ. ಮಿತ್ರ	12
ಅಮೆರಿಕನ್ನಡ		13
ನಿದ್ದೆಯಲ್ಲೊಂದು ಕನಸು !	ಹರಿಹರೇಶ್ವರ	14
ರತ್ನ–ಮದಿರಾ ವಿಲಾಸ	ಶಿವು	16
ಗುಂಡೂಪಂತರ ಗೋಳು	ಕೊಳ್ಳೇಗಾಲದ್ನಾರಾಮಾನುಜ	17
ಟೆಲಿ ಫಿಲಂ	ಶಿವು	23
ಶೀಲಾ	ಶಾಂತಾ ರಘು	28
ಅವೇ ಪದಗಳು–ಪರಿಣಾಮ ವಿಚಿತ್ರ	ಸೀನ	31
ಯಾರು ಎಲ್ಲಿದ್ದಾರೆ ?	ಅ. ರಾ. ಸೇ.	33

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು

ದೂರವಾಣಿ; 342144

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೮ ಜನವರಿ-೧೯೯೦ ಸಂಚಿಕೆ ೪

(ಆ ಪರಾವರನನ್ನು ಕಂಡುಕೊಂಡರೆ) ಹೃದಯದ ಗ್ರಂಥಿ ಬಿಚ್ಚಿಹೋಗುತ್ತದೆ. ಸಂಶಯಗಳು ಕತ್ತರಿಸಿಕೊಳ್ಳುತ್ತವೆ. (ಪಾಪಗಳು ಕ್ಷಯವಾಗುತ್ತವೆ.)

—ಮುಂಡಕ

ತಾನು ಪರಬ್ರಹ್ಮನೆಂದರಿತುಕೊಂಡರೆ, ಸಂದೇಹಗಳು ಪಾಪಗಳು ಇಲ್ಲದಂತಾಗುತ್ತವೆ ಎಂದು ಉಪನಿಷತ್ತು ಹೇಳುತ್ತದೆ.

ಈ ಲೋಕದ ವ್ಯವಹಾರದಿಂದ, ಅದರ ಅವಲೋಕನದಿಂದ, ವಿಚಾರ ವಿಮರ್ಶೆಯಿಂದ, ಹಗುರಾದ ಹೃದಯ (ಬುದ್ಧಿ) ಸುರುಳಿ ಸುತ್ತಿಕೊಳ್ಳುತ್ತದೆ. ಅದರ ಅನುಮೋದನೆಯಿಂದ ಮಾಡದ ಪಾಪಗಳು ಕಾಲಿಗೆ ಸುತ್ತಿಕೊಳ್ಳುತ್ತವೆ.

ಇನ್ನು ಸಂದೇಹಗಳು................

ಈ ನಮ್ಮ ರಾಷ್ಟ್ರವು, ಜನ ನಾಯಕರಿಂದ ಉದ್ಧಾರವಾದರೂ ಆಗಬಹುದು, ಅವರು ನಮ್ಮ ಆಶೆ ಆಕಾಂಕ್ಷೆಗಳನ್ನು ನನಸು ಮಾಡುವ ನವ ಯುಗದ ಹರಿಕಾರರಾದರೂ ಆಗಬಹುದೆಂಬ ಒಂದು ಸಂದೇಹವಿತ್ತು.

ಈಗ ?'! 'ಸಂಜಯ, ಅದಂ ನನ್ನ ಮನಮೇ ಬಲ್ಲುದು'.

-ಜಜ-



— ಪ್ರಕಾಶ್

ಬೇಸಿಗೆ ನೀರು ಅಭಾವ ತಡೆಗೆ ಜಲ ಮಂಡಳಿ ಸಜ್ಜು.

—ಸುದ್ದಿ

ಸರಿ, ಇನ್ನು ನಲ್ಲೀಲಿ ನೀರು ಬರುಲ್ಲ!

* * *

ಅಕ್ರಮ ವಿದ್ಯುತ್ ಬಳಕೆ; ಮೂರು ಪ್ರಕರಣ ಪತ್ತೆ.

—ಪತ್ರಿಕೆ

ಅರೆ, ಅವರಿಗೆ ಎಲ್ಲಿ ವಿದ್ಯುತ್ ಸಿಕ್ಕಿತು?

* * *

ವಿಕ್ಟೋರಿಯಾ ಆಸ್ಪತ್ರೆಗೆ ಇನ್ನೂ 24 ಹಾಸಿಗೆ ಸೌಲಭ್ಯ.

—ಸುದ್ದಿ

ರಾವಣನ ಹೊಟ್ಟೆಗೆ ಅರೆ ಕಾಸು ಮಜ್ಜಿಗೆ!

* * *

"ಉಚಿತ ಶ್ರವಣ ಸಾಧನ ರಿಪೇರಿ ಮತ್ತು ಸೇವೆ".

—ಶೀರ್ಷಿಕೆ

[illegible] ? [illegible] ?

* * *

'ಅವಿಭಕ್ತ ಕುಟುಂಬಗಳು ಹೆಚ್ಚಲಿ'

—ಆರೋಗ್ಯ ಸಚಿವೆ

ದೇಶದ ಬಗ್ಗೆ ಮಾತನಾಡುತ್ತಿದ್ದರೇನು ?

* * *

ದೆಹಲಿಯಲ್ಲಿ ಬಾಲವೊಂದು ನಾಯಿಯನ್ನೇ ಆಡಿಸುವ ದುಃಸ್ಥಿತಿ ಬಂತೇ ಎಂದು ಅಪರಂಜಿ ಚಕಿತಳಾದಳಂತೆ.

* * *

ತಿಂಮನ ತಲೆಯನ್ನು ಹಗುರಾಗಿ ಅಲ್ಲಾಡಿಸಿ ನಮ್ಮನ್ನೆಲ್ಲ ನಗಿಸಿದ ಬೀಚಿ ಅವರನ್ನು ಅಪರಂಜಿ ಸ್ಮರಿಸುತ್ತಾಳೆ.

* * *

'ಉತ್ತರ ಪ್ರದೇಶವೇ ಭಾರತ, ಭಾರತವೇ ಉತ್ತರ ಪ್ರದೇಶ'.

—ಮುಲಾಯಿಮ್ ಸಿಂಘ್ ಯಾದವ್

ಅವರಿಗೆ ಅಷ್ಟು ಹೊಳೆದದ್ದೇ ಆಶ್ಚರ್ಯ !

* * *

ನಾನು ಹುಡುಗಿಯರ ಬಗ್ಗೆ ತಜ್ಞನಲ್ಲ.

—ಅಜರುದ್ದೀನ್

ಈ ತರಹ ಹೇಳಿಕೆಯಿಂದ ಅವರು ಯಾವ ಮೇಯ್ಡನ್‌ಳನ್ನೂ ಬೌಲ್ ಮಾಡ ಲಾರರು !

* * *

ಬೋಫೋರ್ಸ್ ತನಿಖೆ ಮುಚ್ಚಲು ಕೇಂದ್ರದ ಯತ್ನ

—ದಳದ ಆರೋಪ

ಈಗ ದೆಹಲಿಯಲ್ಲಿ ಎರಡು ಕೇಂದ್ರಗಳಿವೆಯಲ್ಲ ?

* * *

ಮೈಸೂರು ವಿಮಾನ ನಿಲ್ದಾಣ ಮುಚ್ಚುವ ವಿರುದ್ಧ ಮನವಿ

—ಪತ್ರಿಕೆ

ಅರೆ, ಅಲ್ಲಿ ವಿಮಾನ ನಿಲ್ದಾಣ ಇದೆಯೆ ?



"ರಂಗ ಅಮೆರಿಕಾದಿಂದ ಬರೆದವ್ನೆ" ನಿನ್ನ ಸೊಸೆ ಎಸ್ರು ಡೆ-ಬೋರ ಅಂತ್ಕಣೆ!
"ಅಯ್ಯೊ, ಅಂದೆಗಾಯ್ತುದೆ? ಡೆ-ಬೋರಿ ಇರಬೇಕ್ರಿ!"

ಹೊಸಗನ್ನಡಕ್ಕೆ ಹೊಸ ಪದಗಳು

—ಆರತಿ

ಹಿಂದೊಮ್ಮೆ ಬರೆದಂತೆ ಕನ್ನಡಕ್ಕೆ ಹೊಸ ಪದಗಳನ್ನು ಸೃಷ್ಟಿಸುವ ನಮ್ಮ ಕೆಲಸ ಅವ್ಯಾಹತವಾಗಿ ಸಾಗಿದೆ. ಕೆಳಗೆ ನೋಡಿ ಬಿಸಿ ಬಿಸಿ ಸ್ಯಾಂಪಲ್‌ಗಳು!

ಮಂಡಲಾಂಧತೆ :- ಗೊತ್ತಿದ್ದೂ ಗೊತ್ತಿದ್ದೂ ಅದೇ ತಪ್ಪನ್ನ ಪುನಃ ಮಾಡೋದು.

ಉದಾ :— "ಟೆನ್ನಿಸ್‌ನಲ್ಲಿ ಎರಡನೇ ಬಾರಿ ಸರ್ವ್ ಮಾಡುವಾಗ ಏಸ್‌ಗೆ ಪ್ರಯತ್ನಿಸಬೇಡ ಅಂತ ನಮ್ಮ ಸ್ಫೂರ್ತಿಗೆ ಎಷ್ಟು ಹೇಳಿದ್ರೂ ಕೇಳುಲ್ಲ ನೋಡ್ರಿ ಅವಳ ಮಂಡಲಾಂಧತೆ ತೀರಾ ಹೆಚ್ಚಿದೆ"

ಜನ್ಮ ಭೂಮಾರಿತನ:— ಯಾರು ಎಲ್ಲಿ ಹೋದರೂ ತನಗೆ ಮಾತ್ರ ಒಂದು ವಸ್ತು ಬೇಕೇ ಬೇಕೆಂದು ಹಠ ಹಿಡಿಯುವುದು.

ಉದಾ :— "ನಮ್ಮ ಪಾಪು ಈಳಿಗೆ ಮಣೆನೇ ಆಟಕ್ಕೆ ಬೇಕು ಅಂತ ಜನ್ಮ ಭೂಮಾರಿ ಹಿಡಿದ್ಬಿಟ್ಟಿದ್ದಾನ್ರೀ ಸರೋಜ ಏನ್ಮಾಡ್ಲಿ?"

ಉಲ್ಪಿಸು :— ಹೇಳ ಹೆಸರಿಲ್ಲದಂತೆ ಕತ್ತಲಿನಲ್ಲಿ ಲೀನವಾಗು.

ಉದಾ :— "ರಾತ್ರೆ ಗೇಟ್ ಶಬ್ದ ಆಯ್ತು ಅಂತ ಟಾರ್ಚ್ ತೆಗೊಂಡು ಹೋದ್ರೆ ಯಾರೂ ಇಲ್ಲ. ಒಂದು ಕ್ಷಣದಲ್ಲಿ ಉಲ್ಪಿಸಿ ಬಿಟ್ಟಿದ್ರು ನೋಡಿ"

ಶೇಖರವದನ :– ಎಂಟು ದಿನ ಜ್ವರ ಬಿದ್ದು ಎದ್ದ ಮುಖ. "ಪಾಪ ನಮ್ಮ ರಾಜನಿಗೆ ಎಂಟು ದಿನ ಜ್ವರ. ಅವನ ಶೇಖರ ವದನಾನ್ನ ನೋಡುಕ್ಕೆ ಆಗಲಿಲ್ಲ ರೀ"

ದೇವೀಲಾಲಿಸು :– ಚೆಂಡನ್ನು ಪುಟ ಹೊಡೆದು ಮತ್ತೆ ಮೇಲೆ ಬರುವಂತೆ ಮಾಡು.

ಉದಾ :– "ಲೋ ಪುಟ್ಟು, ಚೆಂಡನ್ನು ನಾನೂ ಸ್ವಲ್ಪ ದೇವೀಲಾಲಿಸ್ತೀನಿ ನನಗೂ ಕೊಡೋ !"

ಶುಕ್ಲಾಂಬರ :– ಕಾಲು ಕಾಣೋ ಹಾಗೆ ಕಚ್ಚೆ ಉಡುವುದು.

ಉದಾ :– "ಮೊನ್ನೆ ಇಂಗ್ಲೆಂಡ್‌ನಿಂದ ಬಾರ್ಬರಾ ಬಂದಿದ್ದಳಲ್ಲಾ ಆವ್ಳು ರಂಗು ಮಾಮನ ಶುಕ್ಲಾಂಬರ ನೋಡಿ"Very Sexy" ಅಂತಿದ್ಲೂ ರೀ !"

ಯಾದವೀ ಕಲಹ :– 'ಮಂಡಲಾಂಧತೆ' ನೋಡಿ.

ಸ್ವಾಮಿ ಚಾಳಿ :– ಕದಡಿದ ನೀರಿನಲ್ಲಿ ಮೀನು ಹಿಡಿಯುವಿಕೆ (Fishing in troubled waters)

ಉದಾ :– "ನನ್ನ ಮಗ, ಸೊಸೆ ತಮ್ಮ ಪಾಡಿಗೆ ತಾವು ಸುಖವಾಗಿ ಕಚ್ಚಾಡ್ತಿದ್ರೆ, ನನ್ನ ಹೆಂಡ್ತಿ ಯಾಕೆ ಬಾಯಿ ಹಾಕಿಕೊಂಡು ಹೋಗಬೇಕು ಅಂತೀನಿ. ಅವಳಿಗೆ ಯಾಕೆ ಈ ಸ್ವಾಮಿ ಚಾಳಿ ?"

ರಸಯಾತ್ರ

—ಲೀಲಾ ಮಿರ್ಲೆ

ಅಮೇರಿಕದಿಂದ ಬಂದ ನನ್ನ ದೊಡ್ಡಮ್ಮನ ಮಗಳು ಗೀತಳ ಪ್ರಕಾರ "ಭಾರತದಲ್ಲಿ ನೋಡುವಂತಹ ಸ್ಥಳಗಳು ಬೇಕಾದಷ್ಟಿವೆ. ಆದರೆ ಪ್ರಯಾಣ ಮಾಡುವುದು ಮಾತ್ರ ಒಂದು ದೊಡ್ಡ ಗಂಡಾಂತರ. ಆ ಬಿಸಿಲು, ನೂಕು ನುಗ್ಗಾಟ, ಧೂಳು ಸಾಧ್ಯವೇ ಇಲ್ಲ" ಅಂತ ಅವಳ ಅನಿಸಿಕೆ ನಿಜ. ನಮ್ಮ ದೇಶದಲ್ಲಿ ಬಸ್ಸು, ಟ್ರೈನು ಯಾವುದರಲ್ಲೇ ಪ್ರಯಾಣ ಮಾಡಿದರೂ ತಾಪತ್ರಯಗಳು ಖಂಡಿತ. ಆದರೆ ಈ ಅನಾನುಕೂಲಗಳ ಮಧ್ಯೆ, ಈ ಪ್ರಯಾಣಗಳು ನಮಗೊದಗಿಸುವ ಹಲವಾರು ರಸಮಯ ಸನ್ನಿವೇಶಗಳು, ಸ್ವಾರಸ್ಯವಾದ ಪ್ರಸಂಗಗಳು, ಪ್ರವಾಸದ ಅನಾನು ಕೂಲಗಳನ್ನು ಮರೆಸಿಬಿಡುತ್ತದೆ.

ನಮ್ಮವರೊಂದಿಗೆ ರಜೆಯಲ್ಲಿ ಹೊರಗೆ ಹೋಗುವ ಪ್ಲಾನ್ ಮಾಡುವುದು, ಅವರಿಗೆ ರಜ ಸಿಗಲಿಲ್ಲ ಅಂತ ಕ್ಯಾನ್ಸಲ್ ಮಾಡೋದು, ನಂತರ ಒಂದು ಪುಟ್ಟ ಜಗಳ, ಹೀಗೆ ಜೀವನ ಕಳೆಯುತ್ತಿದ್ದ ನನಗೆ, ಸ್ನೇಹಿತೆಯರು 'ವ್ಯವಸ್ಥಿತ ಪ್ರವಾಸದಲ್ಲಿ ಉತ್ತರ ಭಾರತದ ಟೂರ್‌ಗೆ ಹೋಗ್ತೀವೆ, ನೀನೂ ಬರ್ತೀಯಾ' ಎಂದಾಗ ಎಲ್ಲಿಲ್ಲದ ಖುಷಿಯಾಯ್ತು. ನಾವು ನಾಲ್ವರು ಸ್ನೇಹಿತೆಯರು ಪ್ರವಾಸ ಹೊರಟೆವು. ನಮ್ಮ ದೇಶದಲ್ಲಿ ನಾನಾ ಭಾಷೆಗಳಿರುವುದಲ್ಲದೆ, ಪ್ರತಿಯೊಂದು ಭಾಷೆಯ ಜನರ ಉಚ್ಚರಣೆಯಲ್ಲೂ ಅದರವೇ ಆದ ಒಂದು ವೈಶಿಷ್ಟ್ಯವಿರುತ್ತದೆ. ಅನೇಕ ಭಾಷೆಗಳ ಜನರಿದ್ದ ನಮ್ಮ ಗುಂಪಿನಲ್ಲಿ ಕಾಲ ಕಳೆದದ್ದೇ ತಿಳಿಯಲಿಲ್ಲ.

ಶ್ರೀಮತಿ ಮಿಶ್ರ ತಮ್ಮ ಇತರ ಪ್ರವಾಸಗಳ ಬಗ್ಗೆ ಹೇಳುತ್ತಿದ್ದರು 'ಹೋದ ಸರ್ತಿ ದ್ವಾರಕಾಗೆ ಹೋಗಿದ್ದಾಗ ಅಲ್ಲಿ Rich Moneyಯ ದರ್ಶನ ವಾಯಿತು. ತುಂಬಾ ಚೆನ್ನಾಗಿತ್ತು ಎಂದರು. ನನಗೆ ಅರ್ಥವಾಗಲಿಲ್ಲ. Black money, white money ಕೇಳಿದ್ದೇನೆಯೇ ವಿನಹ Rich money, poor money ಎಂಬ ಇನ್ನೆರಡು ಗುಂಪುಗಳಿರುವುದು ನನಗೆ ತಿಳಿದಿರಲಿಲ್ಲ, 'ಏನಂದ್ರಿ ಮಿಸೆಸ್ ಮಿಶ್ರ, Rich money ಎಂದರೇನು ?" ಎಂದು ಹಿಂದಿಯಲ್ಲಿ

ಕೇಳಿದೆ. "ಅದೇ Rich money ಗೊತ್ತಿಲ್ಲವೆ, ಶ್ರೀ ಕೃಷ್ಣನ ಹೆಂಡತಿ" ಎಂದರು. ಆಗ ಗೊತ್ತಾಯಿತು ಅದು ರುಕ್ಮಿಣಿಯ ಉತ್ತರ ಭಾರತದ ನಾಮಕರಣವೆಂದು !

ಇಂಗ್ಲೀಷ್ ನಮ್ಮ ಭಾಷೆಯಲ್ಲ. ಆದರೂ ಅದು ದಕ್ಷಿಣದಲ್ಲಿ ಬೇರೂರಿರುವ ಹಾಗೆ ಉತ್ತರದಲ್ಲಿಲ್ಲ. ಇದೇ ಪ್ರವಾಸದಲ್ಲಿ, 'ಕಲ್ಕತಾದಲ್ಲಿ ಒಂದು ಪುರಾತನ Mediation Hall ಇದೆ. ಆ ಸ್ಥಳದಲ್ಲೇ ಹಿಂದೆಬುದ್ಧ Mediate ಮಾಡಿದ್ದ ಅಂತ ಶ್ರೀ ಗುಪ್ತಾ, ಅವರು ಹೇಳಿದಾಗ ಎಲ್ಲರಿಗೂ ದಂಗು ಬಡಿದಂತಾಯಿತು. ಅಲ್ಲ ಬುದ್ಧ ತೀರ ಅಲ್ಲಿ ಇಲ್ಲಿ ನಿಂತ್ಕೊಂಡು Mediate ಮಾಡ್ತಿದ್ದ ಅಂದ್ರೆ ನಂಬಕ್ಕೆ ಸಾಧ್ಯವೇ ? ಇದು ಇನ್ಯಾವುದೊ ಇಂಗ್ಲಿಷ್ ಪದದ ಅಪಭ್ರಂಶವಿರಬೇಕು ಎಂದು ಯೋಚಿಸಿದೆ. ಹೊಳೆದೇ ಬಿಟ್ಟಿತು_ Mediate ಎಂದರೆ Meditate ಎಂದು .

ಇನ್ನೊಮ್ಮೆ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದೆ. ವಿಪರೀತ ನೂಕು ನುಗ್ಗಲು. ಯುವತಿಯೊಬ್ಬಳು ನನ್ನ ಪಕ್ಕ ಇದ್ದ ಸ್ವಲ್ಪ ಜಾಗದಲ್ಲೆ ಬಂದು ಕುಳಿತಳು. ನನ್ನನ್ನು ಆಶ್ಚರ್ಯದಿಂದ ನೋಡಿ, "ನೀವು ಈ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರುವುದು ನನ್ನ ಅದೃಷ್ಟ. I'm so lucky' ಎಂದು ಹೇಳುತ್ತಾ, ಅವಳ ಹ್ಯಾಂಡ್ ಬ್ಯಾಗ್‌ನಿಂದ ಒಂದು ಆಟೊಗ್ರಾಫ್ ಪುಸ್ತಕ ತೆಗೆದು 'ದಯವಿಟ್ಟು ನಿಮ್ಮ ಆಟೊಗ್ರಾಫ್ ಕೊಡ್ತಿರಾ' ಎಂದಳು. ನನಗೆ ದಿಗ್ಭ್ರಮೆ. ನನ್ನ ಪ್ರಶ್ನಾರ್ಥಕ ಮುಖಭಾವವನ್ನು ಕಂಡು 'ನೀವು ಪ್ರಸಿದ್ಧ ಚಿತ್ರಗಾರ್ತಿ ಶಶಿಕಲಾ ಅಲ್ಲವೇ' ಎಂದಳು. 'ಇಲ್ಲಮ್ಮಾ, ನಾನು ಶಶಿಕಲಾ ಅವರಲ್ಲಾ, ಏನೂ ಮಿಸ್‌ಟೇಕ್ ಆಗಿದೆ' ಎಂದೆ, "ನೀವು ತೀರ ಹಾಗೇ ಕಾಣ್ತಿರ, ಮುಖದ ಹೋಲಿಕೆ ಒಂದೇ ಅಲ್ಲ, ನಿಮ್ಮ ಕೈಗಳು Typical artists hands. ನಿಮ್ಮ Personality ನೋಡಿದ್ರೆ, ನೀವು ಖಂಡಿತ Artist ಎನ್ನಿಸುತ್ತೆ" ಎಂದಳು. ನೆಟ್ಟಗೆ ಒಂದು ಗೆರೆ ಹಾಕಲೂ ಬರದ ನಾನು ಹೀಗೆಲ್ಲಾ ಕಾಣತ್ತಿನಲ್ಲ ಎಂದು ಬಲು ಸಂತೋಷವಾಯಿತು. "ಇಲ್ಲಮ್ಮಾ ನಾನು ಯಾವ artistಊ ಅಲ್ಲ. ಸಣ್ಣ ವಯಸ್ಸಿನಲ್ಲಿ ಡ್ರಾಯಿಂಗ್ ಕ್ಲಾಸ್‌ನಲ್ಲಿ ನೂರಕ್ಕೆ ಎಂಟು ನಂಬರ್ ಬಂದಾಗಲೇ ನನ್ನ ಕಲಾಭಿರುಚಿ ವ್ಯಕ್ತವಾಗಿ, ನಾನು ಅದರ ಗೊಡವೆಗೆ ಹೋಗಿಲ್ಲ" ಎಂದೆ. ಆದರೂ ಅವಳು ನನ್ನ ಮಾತನ್ನು ನಂಬಲಿಲ್ಲ. ನನ್ನಲ್ಲಿ Artistic nature ಇದೆ ಎಂದೂ, ವಿದ್ಯೆಗೆ ವಯಸ್ಸಿಲ್ಲವೆಂದೂ, ಯಾವುದಾದರೂ ಕಲಾ ಮಾಧ್ಯಮವನ್ನು ನಾನು ಈಗಲೂ ಪ್ರಯತ್ನಿಸಬೇಕೆಂದೆಲ್ಲಾ ತುಂಬಾ ಹೇಳಿದಳು. ಕೆಲವರ ಸ್ವಭಾವವೇ ಹಾಗೆ. ನಾನು ಯಾರೊ, ಅವಳ್ಯಾರೊ, ಆದರೂ ಅದೆಷ್ಟು ವಿಶ್ವಾಸ, ಉತ್ತೇಜಿಸುವ ಗುಣ. ಅವಳೊಂದಿಗೆ ಮಾತುಕತೆ ಬಹಳ ಹಿತಕರವಾಗಿತ್ತು. ಅವಳು ಇಳಿಯುವುದಕ್ಕೆ ಮುಂಚೆ ಇನ್ನೂ ಏನೇನೊ ಹೊಗಳಿದಳು.

ಅವಳು ಇಳಿದ ನಂತರ, ಏಕೊ ಹ್ಯಾಂಡ್ ಬ್ಯಾಗ್‌ನ ಕ್ಲಿಪ್ ಸಡಿಲವಾಗಿತ್ತು. ತೆರೆದು ನೋಡಿದೆ. ಹಣವಿದ್ದ ಚಿಕ್ಕ ಪರ್ಸ್ ನಾಪತ್ತೆ. ಅವಳು ಬಸ್ಸು ಹತ್ತುವ ಮುನ್ನ ಅದೇ ಪರ್ಸಿನಿಂದ ಹಣ ತೆಗೆದು ಕಂಡಕ್ಟರಿಗೆ ಕೊಟ್ಟಿದ್ದೆ. ಛೆ, ಎಂಥ ಕೆಲಸ. ನನ್ನನ್ನು ನಾನು ಬೈದುಕೊಂಡೆ. ನಮ್ಮ ಹಿರಿಯರು ಹೊಗಳಿಕೆಗೆ ಬಾಯಿ ಬಿಡಬಾರದು ಅಂತ ಒಂದನೇ ಕ್ಲಾಸಿನಲ್ಲೇ ಕಾಗೆ ನರಿ ಕಥೆ ಕಲಿಸಿದ್ದರೂ ಅದು ಸುತರಾಂ ತಲೆಗೆ ಹತ್ತಿಲ್ಲ, ಶುದ್ಧ ದಂಡ ಅಂತ ರೇಗಿತು.

ಹೋದ ವಾರ ಏನಾಯ್ತು ಅಂತಿರಾ. ನಾನು ಮತ್ತು ನಮ್ಮವರು ಟ್ರೈನಲ್ಲಿ ಪ್ರಯಾಣ ಮಾಡುತ್ತಿದ್ದೆವು. ಸುಮಾರು 15-20 ಜನರ ದೊಡ್ಡ ತಂಡ ನಮ್ಮ ಗಾಡಿಯಲ್ಲಿ ಪ್ರಯಾಣ ಮಾಡುತ್ತಿತ್ತು. ಆ ಗುಂಪಿನಲ್ಲಿದ್ದ ಯುವಕ ಚಿಳ್ಳಾಪಿಳ್ಳೆಗಳನ್ನೆಲ್ಲಾ ಒಟ್ಟುಗೂಡಿಸಿ Card trickಗಳು, ಕರವಸ್ತ್ರದಿಂದ ಉಂಗುರ ತರಿಸುವುದು, ಇತ್ಯಾದಿ ಏನೇನೂ ಮ್ಯಾಜಿಕ್ ಮಾಡಿ ತೋರಿಸುತ್ತಿದ್ದ. ಪ್ರಯಾಣಿಕರಿಗೂ ಸಮಯ ಕಳೆದದ್ದೇ ತಿಳಿಯಲಿಲ್ಲ. ಕೆಲವು ಸ್ಟೇಷನ್‌ಗಳ ನಂತರ ಆ ಗುಂಪಿನಲ್ಲಿದ್ದ ಆರು ವರ್ಷದ ವಿವೇಕ ನಗುತ್ತಾ "ಮಾಮಾ, ನಿಮ್ಮ ಸಣ್ಣ ಕ್ಯಾಮೆರಾ ಎಲ್ಲಿ ? ಮ್ಯಾಜಿಕ್ ಮಾಡಿದೀನಿ. ಈಗ ತರಿಸಿ" ಎಂದ. ಎಲ್ಲಾ ಸುತ್ತಾಮುತ್ತಾ ಹುಡುಕಿದರು. ಕ್ಯಾಮೆರಾ ಸಿಗಲಿಲ್ಲ. ಅವನಮ್ಮ "ಜಾಣ ಮರಿ, ಎಲ್ಲಿಟ್ಟಿದ್ದಿ, ಕೊಡಪ್ಪಾ ಎಂದು ಬೇಡಾಡಿದಳು. "ನಾನು ಛೂ ಮಂತ್ರ ಕಾಳಿ– ಎಂದೆ. ಅದು ಹೊರಟುಹೋಯ್ತು" ಎಂದ ವಿವೇಕ ಕುಣಿಯುತ್ತಾ. ನಾವು ಇಳಿಯಬೇಕಾದ ಸ್ಟೇಷನ್ ಬಂದಾಗಲೂ ಕ್ಯಾಮೆರ ಇನ್ನೂ ಸಿಕ್ಕಿರಲಿಲ್ಲ. ನಾವು ಇಳಿದು ಸ್ನೇಹಿತರ ಮನೆಗೆ ಹೋದೆವು. ನಮ್ಮವರು ಅವರ ಕಿಟ್ ಬ್ಯಾಗನ್ನು ಏಕೊ ತೆಗೆದಾಗ ಅದರಲ್ಲಿತ್ತು ಕ್ಯಾಮೆರಾ ! ಅದನ್ನ ಹ್ಯಾಗಪ್ಪ ಈಗ ತಲುಪಿ ಸೋದು !

❋ ❋ ❋

ಗಂಡನಿಗೆ

—ಅ. ರಾ. ಮಿತ್ರ

ನಿನ್ನ ಪ್ರೇಮದ ಹಕ್ಕಿ ರೆಕ್ಕೆ ಬಲಿಯುವ ಮುನ್ನ
ಎಷ್ಟು ಚಂದವಿತ್ತು ಗೊತ್ತೆ ?
ಬಲಿತ ಮೇಲೆ
ನಿನ್ನ ಕುಟುಕು, ರೆಕ್ಕೆ ಬಡಿತ, ಎಗರಾಟ,
ಸಂಚು ಬುದ್ಧಿ ತಿಳಿಯುತ್ತಿದೆ.

ಈಗ
ಬೇರೆ ಗೂಡುಗಳಿಗೆ ನುಗ್ಗುವ ಚಪಲ ನಿನಗೆ
ಆದರೆ ಪುಕ್ಕಲು
ಹೊರಗೆ ಹಾರಲಾರದೆ
ಬಯಲ ಹಾರಾಟದ ಎಲ್ಲ ಕನಸುಗಳ ಧಗೆ ತಡೆಯಲಾರದೆ
ನನ್ನ ಬಳಿ ಎಗರಾಡುತ್ತಿದ್ದಿ.

ನಿನ್ನ "ಹುಡುಗಾಟ" ನನಗೆ ಅರ್ಥವಾಗುತ್ತದೆ
ಆದರೆ ನಿನ್ನ 'ಹುಡುಗಿಯಾಟ'ದ ನೆಲೆ ಕಾಣದಲ್ಲ.
ನೀನು ಗಸಗಸೆ ಪಾಯಸ ಕುಡಿದು
ನನಗೆ ಬದುಕೆಲ್ಲ ಯಮ ನಿದ್ದೆ.

ನಿನ್ನ ದೈನಂದಿನ ವಿಕಲ ನಡವಳಿಕೆಗೆ
ವ್ಯಾಖ್ಯೆ ಬರೆಯಲಾರೆ–ಎಂದುಕೊಂಡೆಯ, ಬೆಪ್ಪ
ನಿಜ ಹೇಳಬೇಕೆಂದರೆ
ನಿನ್ನ ಸ್ಥಿತಿಯೇ ನನಗೆ
—ಈಗ ತೀರಿತೆ ಲೆಕ್ಕ ! !

ಅಮೆರಿಕನ್ನಡ

ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿನ ಕನ್ನಡಿಗರಿಗಾಗಿ ಅಲ್ಲಿ ಕನ್ನಡ ಪತ್ರಿಕೆಯೊಂದು ಇರುವುದು ನಿಮಗೆ ಆಶ್ಚರ್ಯವೆನಿಸಬಹುದು. ಆದರೆ ಅದು ನಿಜ. ಶ್ರೀ ಎಸ್. ಕೆ. ಹರಿಹರೇಶ್ವರ ಹಾಗೂ ಅವರ ಪತ್ನಿ ಶ್ರೀಮತಿ ನಾಗಲಕ್ಷ್ಮಿ ಅವರುಗಳು ಕಳೆದ ಹಲವು ವರ್ಷಗಳಿಂದ 'ಅಮೆರಿಕನ್ನಡ' ಪತ್ರಿಕೆಯನ್ನು ಅಮೆರಿಕೆಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ.

ಇತ್ತೀಚಿಗೆ 'ಅಪರಂಜಿ'ಗೂ 'ಅಮೆರಿಕನ್ನಡ'ಕ್ಕೂ ನೆಂಟಸ್ತಿಕೆ ಬೆಳೆಯಿತು. 1988ರ ಫೆಬ್ರುವರಿಯಲ್ಲಿ ಅಪರಂಜಿಯಲ್ಲಿ ಪ್ರಕಟವಾದ 'ಅಣಕವಾಡುಗಳು' ಕವನಗಳನ್ನು ಮೆಚ್ಚಿ ಹರಿಹರೇಶ್ವರ ಅವರು ಅವನ್ನು ತಮ್ಮ 31ನೆಯ ಸಂಚಿಕೆಯಲ್ಲಿ ಪ್ರಕಟಿಸಿದರು.

ಆ ಸಂದರ್ಭದಲ್ಲಿ ಅವರು ಹೊಸ ಅಣಕು ಕವನಗಳ ರಚನೆಯನ್ನು ಪ್ರೋತ್ಸಾಹಿಸಲು 'ರತ್ನ'ರ "ಯೆಂಡ ಯೆಂಡ್ತಿ ಕನ್ನಡ ಪದಗೊಳ್" ಕವಿತೆಯನ್ನು ಬೇರೆ ಬೇರೆ ಕವಿಗಳ ಶೈಲಿಗಳಲ್ಲಿ ಬರೆಯಲು ಓದುಗರನ್ನು ಆಹ್ವಾನಿಸಿದ್ದರು. ಈ ಸ್ಪರ್ಧೆಗೆ ಬಂದ ಪ್ರತಿ ಕ್ರಿಯೆಗಳನ್ನು ಅಪರಂಜಿ ಬಳಸಲು ಉದಾರ ಮನೋಭಾವದಿಂದ ಅನುಮತಿ ಇತ್ತಿದ್ದಾರೆ. 'ರತ್ನ'ರ ಮೂಲ ಕವನ, ಅದನ್ನು ಬೇಂದ್ರೆಯವರ ಶೈಲಿಯಲ್ಲಿ ಹರಿಹರೇಶ್ವರ ಅವರು ಬರೆದಿದ್ದರೆ, ಭಾಮಿನಿ ಷಟ್ಪದಿಯಲ್ಲಿ 'ಶಿವು' ಅವರು ಬರೆದಿದ್ದಾರೆ. ಓದಿ ನೋಡಿ.

ರತ್ನರ ಮೂಲ ಕವನ

ಕನ್ನಡ್ ಪದಗೊಳು

ಯೆಂಡ ಯೆಂಡ್ತಿ ಕನ್ನಡ್ ಪದಗೊಳ್
ಅಂದ್ರೆ ರತ್ನಂಗ್ ಪ್ರಾಣ!
ಬುಂಡೇನ್ ಎತ್ತಿ ಕುಡದ್ಬುಟ್ಟಾಂದ್ರೆ—
ತಕ್ಕೊ! ಪದಗೊಳ್ ಬಾಣ!

'ಕನ್ನಡ್ ಪದಗೋಳ್ ಆಡೋದ್ನೆಲ್ಲ
ನಿಲ್ಲೀಸ್ ಬುಡಬೇಕ್ ರತ್ನ!'
ಅಂತ್ ಔನ್ ಅಂದ್ರೆ—ದೇವ್ರ್ ಅದ್ರ್ ಏನು
ಮಾಡ್ತೀನ್ ಔನ್ಗೆ ಖತ್ನ!

ಬಗವಂತ್ ಏನ್ರ ಬೂಮಿಗ್ ಇಳದು
ನನ್‌ತಾಕ್ ಬಂದಾಂತ್ ಅನ್ನು;
ಪರ್‌ಗಿರೀಕ್ಸೆ ಮಾಡ್ತಾನ್ ಔನು—
ಒಕ್ತಾನ್ ಮೇಲ್ ಔನ್ ಕಣ್ಣು!

ನರಕಕ್ಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ —
ಮೂಗ್ನಲ್ ಕನ್ನಡ್ ಪದವಾಡ್ತೀನಿ!
ನನ್ ಮನಸನ್ ನೀ ಕಾಣೆ!

"ನಿದ್ದೆಯಲ್ಲೊಂದು ಕನಸು!"

ಎಸ್. ಕೆ. ಪರಂಪರೇಶ್ವರ

"ಯಾರು ನಿಂದವರಲ್ಲಿ, ಸ್ವಾಮೀ" ಎಂದೆ;
"ನಿನ್ನ ಭಾಗ್ಯದ ದೈವ, ನಾ ನೋಡ ಬಂದೆ."

"ಭಗವಂತ, ನಮಿಸುವೆನು ಕೈಯು ಮುಗಿದು."
"ಇರಲಿರಲಿ, ನಾ ಭುವಿಗಿಳಿದ ಕಾರಣವು ಹಿರಿದು"

"ಏಕೆ ದೇವಾ, ಏನಾದರಪಚಾರವಾಯ್ತೆ?"
"ಇಲ್ಲ, ಭಕ್ತನ ಪರೀಕ್ಷೆ ಅವನಿಗೇ ಒಳಿತಲ್ತೆ?"

"ನಾ ಸಿದ್ಧ, ನೀ ಹೇಳು ಮಾಡಬೇಕಾದುದನ್ನ"
"ಹೇಳುವುದೇನಿಲ್ಲ, ಪ್ರಶ್ನೆ ಕೇಳಲೇ ನಿನ್ನ?"

"ಅಷ್ಟೆ ತಾನೆ ? ಕೊಡುವೆನುತ್ತರ, ದೇವ ಕೇಳು"
"ನಿನಗೆ ತುಂಬ ಇಷ್ಟ ಏನು ಬೇಗ ಹೇಳು."

"ಹೆಂಡ, ಹೆಂಡತಿ. ನನಗೆ ಕನ್ನಡವೇ ಪ್ರಾಣ"
"ಹೌದ ? ಯೋಚಿಸಿ ಹೇಳು, ದುಡಕದಿರು ಜಾಣ"

"ಮಧುಪಾನಮತ್ತನಿರೆ ಬಿಡುವೆ ಕನ್ನಡ ಪದಗಳ ಬಾಣ!"
"ಕುಡಿದಾಗ ಬಣ್ಣ ಬೆಳಕಾಗುವುದು ಸಾಮಾನ್ಯ ಕಾಣ"

"ಏಕೆ ಅನುಮಾನಿಸುತಿಹೆ, ಪೇಳು ಪೇಳಲ್ಲ"
"ಬಿಡು ಮದ್ಯ, ಬಿಟ್ಟು ಬಿಡು, ನಿನಗದೊಳಿತಲ್ಲ."

"ಬಲು ಕಷ್ಟ, ಕಷ್ಟ, ಬಿಡಲು ಹಿಡಿದ ಅಭ್ಯಾಸ."
ಬಿಡದೆ ತೊಡಗಿರೆ ನಿನ್ನ ಆರೋಗ್ಯಕೇ ಮೋಸ."

"ನೀ ಹಾಗೆ ಹೇಳಿದರೆ, ಬಿಟ್ಟೇನು ಹೆಂಡತಿ ಕೂಡ"
"ಛೆ, ನಾ ಹಾಗೆಲ್ಲಂದೆ ? ಅತಿ ಎಲ್ಲಿಯೂ ಬೇಡ."

"ಇಷ್ಟವಾದುದನೊಂದು ಒಂದಾಗಿ ಬಿಡಿಸುತಿಹೆ, ಆಹ!"
"ನಷ್ಟವೇನಿಲ್ಲ, ಬಿಡು ಕನ್ನಡದ ಮೇಲಿನ ಮೋಹ."

"ಏನಂದೆ ? ಬಿಡಬೇಕೆ? ಅದು ನನ್ನ ಉಸಿರು!"
"ತುಂಬ ಅಭಿಮಾನದ ಮಾತು. ಉತ್ಪ್ರೇಕ್ಷೆ ಹಸಿರು".

"ಬಿಡಲಾರೆ ಕನ್ನಡವ, ಯಾರೆಷ್ಟು ಹೇಳಿದರು ಸರಿಯೆ."
"ಈ ಹುಚ್ಚು ಬಿಡು, ರತ್ನ, ಏನಾದರೂ ಲಾಭವಿದೆಯೆ?"

"ದೇವರಿರಬಹುದು, ಹೆಚ್ಚು ಮಾತಾಡದಿರು, ನಿನ್ನ ಕೊಂದೇನು!"
"ಎಲವೋ ಮುಂಗೋಪಿ, ಬಡಬಡಿಸುತಿಹೆ, ಅಮಲೇರಿತೇನು ?

"ನೂಕಿ ನರಕಕೆ, ಸೀಳಿ ನಾಲಗೆಯ ಬಾಯಿ ಹೊಲಿಸಿ...."
"ನಿನಗೊಂದು ಭ್ರಮೆ ! ಆಗ ಏನ ಮಾಡುವೆ ರೋಸಿ?"

"ಘೂಗಿನಲಿ ಕನ್ನಡವನಾಡುವೆನು ಬಿಡದೆ."
"ಭೇಷ್, ಮೆಚ್ಚಿದೆ ಮಗನೆ; ಗೆದ್ದೆ ನೀ ಕೆಡದೆ!"

"ಭಕ್ತನೇ (ದೇ)ವರ ಕೇಳುವನೆಂದು ಹಿಂದೆ ಓದಿದ್ದೆ."
"ಇರಲಿ, ಕಾಲ ಬದಲಾಗಿಹುದು; ಬಿಟ್ಟೇಳು ನಿದ್ದೆ".

ಅಪಘಾತ

ಅಪಘಾತಂಗಳ ಕಂಡು ಕಂಡು ಕುಸಿದೆಂ ಧಿಕ್ಕೀ ಪ್ರಿಯರ್ ಈ ಜನರ್
ಚಪಲರ್ ವೇಗದ ಸಾಹಸೋದ್ಯಮಗಳಿಂ ಸಿಕ್ಕಂತೆ ಮುನ್ನುಗ್ಗುವರ್
ಜಪಿಪಂತಾಯಿತಕಾಲ ಮೃತ್ಯುವನಿವರ್ ಜೀವಕ್ಕೆ ಹಾಹಾರವಂ
ಕೃಪೆಯಿಂ ದೇವನದೆಂತು ಗೈಯುವನು ಪೇಳ್ ಕಾಲಂಗೆ ನೇರಾದರಂ ?

ರತ್ನ-ಮದಿರಾ ವಿಲಾಸ

—ಶಿವು

ಕುಡಿದು ದಣಿಯನು ಹುಳಿಯು ಹೆಂಡವ
ಹಾಡಿ ದಣಿಯನು ಕವನ ಸಂಚಯ
ಮಡದಿ ಜೊತೆಗಿರೆ ಸಗ್ಗ ಸುಖವೆನಗಿಲ್ಲೆ ದೊರೆತಂತೆ
ದುಡಿದು ರತ್ನನು ಪಾನದಂಗಡಿ
ಗಡಿಯ ದಾಟುತ ಪಾನಪಾತ್ರೆಯು
ಹಿಡಿದು ಕುಡಿಯಲು ಕೇಳಿ ಬಂದುದು ಕಾವ್ಯಧಾರೆಯದು.

ಇಳೆಗೆ ಬಂದರೆ ದೇವದೇವನು
ಸುಳಿದು ಪಾನದ ಕಟ್ಟೆ ಬಳಿಯಲಿ
ಉಳಿದ ಭಕ್ತರ ಬಿಟ್ಟು ರತ್ನನ ಸನಿಹ ಬಂದಿರಲು
ಹೊಳೆವ ಕಣ್ಣಿನ ಕರುಣ ದೃಷ್ಟಿಯ
ಜ್ವಲಿಸಿ ನೋಡುತ ಭಕ್ತ ರತ್ನನ
ನಿಲಿಸಿ ಸಾರಿದ ತನ್ನ ಆಜ್ಞೆಯ ಮುದದಿ ಭಗವಂತ.

ಸಲ್ಲ, ಸಲ್ಲದು ನಿನ್ನ ಗಾನವು
ಇಲ್ಲಿ ಕುಳಿತಿರುವಂತೆ ಈಗಳೆ
ಎಲ್ಲ ಕನ್ನಡ ಹಾಡುವಿಕೆಯನು ನಿಲ್ಲಿಸುವುದೆಂದ ;
ಬೆಲ್ಲದಂತಹ ಹಾಡುಗಾರಿಕೆ
ನಿಲ್ಲಿಸದೆ ಬಲು ರೋಷದಿಂದಲೆ
ಕಲ್ಲನೆಸೆಯಲು, ಖತನ ಮಾಡಲು ಸಿದ್ಧನಾ ರತ್ನ.

ಉರಿವ ಬೆಂಕಿಯು ತೆರನ ಬಾಗಿಲ
ನರಕಯಾತ್ರೆಯು ಬಂದುದಾದರೆ
ಇರಿದ ನಾಲಿಗೆ, ಹೊಲಿದ ಬಾಯದು ಪ್ರಾಪ್ತಿಯಾಗಿರಲು,
ಸಿರಿಯೆ ಕನ್ನಡ ಹಾಡುವಿಕೆಯನು
ಸರಿ, ಸರಿ, ನಾ ಮೂಗಿನಿಂದಲೆ
ಪರಿ, ಪರಿಯಲಿ ಹಾಡ ಬಯಸುವೆ ನನ್ನ ನೀನರಿಯೆ !



ಕೊರವಂಜಿಯಿಂದ....

ಗುಂಡೂಪಂತರ ಗೋಳು

–ಕೊಳ್ಳೇಗಾಲದ್ವಾರಾಮಾನುಜ

ಅರಿಕೇಸರಿ, ಪ್ರತಿವಾದಿ ಭಯಂಕರ, ವೇದ ವಿದ್ಯಾ ಪಾರಂಗತ ಅಗ್ರಹಾರದ ಗುಂಡೋಪಂತರ ಮನೆಯ ಮುಂದೆ ಮೂರು ಜಟಕಾಗಳು ಬಂದು ನಿಂತವು.

ಪಂತರ ಹಿರೀ ಮಗ ಹರಿ. ಮದರಾಸು ಶಹರಿನಲ್ಲಿ ದೊಡ್ಡ ಆಫೀಸರು, ಹಿಂದೀ ಚಳುವಳಿಯಲ್ಲಿ ಹುಡುಗರಿಗೆ ಎರಡು ತಿಂಗಳು ರಜೆ ಹೇಗೂ ಸಿಕ್ಕಿದೆ. ಪರೀಕ್ಷೆಗಳದು ನಿಶ್ಚಯವಿಲ್ಲ, ರೇಷನ್ ತಾಪತ್ರಯವೂ ತಪ್ಪುತ್ತೆ, ಎಂದು ಒಂದು ತಿಂಗಳು ರಜೆ ಬರೆದು ಸಂಸಾರ ಸಮೇತ (ಹೆಂಡತಿ, ಇಬ್ಬರು ಗಂಡು ಮಕ್ಕಳು, ಒಂದು ಕೈ ಕೂಸು) ಕೊಳ್ಳೇಗಾಲಕ್ಕೆ ಬಂದಿಳಿದ.

ಗಾಯತ್ರಿ, ಪಂತರ ಒಬ್ಬಳೇ ಮಗಳು. ಪ್ರೀತಿಯ ಮಗಳು. ಗಂಡನಿಗೆ ಬೆಂಗಳೂರಿನ ದೊಡ್ಡ ಕಾರ್ಖಾನೆಯಲ್ಲಿ ಕೆಲಸ. ಒಂದೇ ಒಂದು ಗಂಡು ಮಗು ಹೆಸರು ನೃಪತುಂಗ. ಕಾಲೇಜಿನಲ್ಲಿ ಓದುತ್ತಾ ವಿರಾಮ ವೇಳೆಯಲ್ಲಿ ಕನ್ನಡ-ಡಿ ಎಂ. ಕೆ.ಯಲ್ಲಿ ಓಡಾಡುತ್ತಿರುವ ಆಕೆ ಗಂಡನಿಗೆ ರಜ ಇಲ್ಲದ ಪ್ರಯುಕ್ತ, ನೃಪ ತುಂಗನ ಜೊತೆ ಬಂದಿಳಿದಳು ಅಪ್ಪನ ಮನೆಗೆ.

ಕಿರೀ ಮಗ ಸೇತೂರಾಮು. ಕೈಗೆ ಸಿಕ್ಕ ಕಿರೀ ಹುಡುಗನನ್ನು ಪಂತರು ತಮ್ಮ ಆಚಾರ ವಿಚಾರಗಳಲ್ಲಿ ಸಿಲುಕಿಸಿ, ಸಂಧ್ಯಾವಂದನೆ ಸಂತರ್ಪಣೆ ಏಕಾ ದಶಿ ಎನ್ನುತ್ತಾ ಸೊರಗಿದ ಸೋರೇಕಾಯಿ ಮಾಡಿ ಹಾಕಿದ್ದರು. ಆತ ಮೈಸೂರು ಫುಡ್ ಟೆಕ್ನಾಲಜಿ ಸೇರಿ ಕೊಬ್ಬಿದ ಕುಂಬಳವಾಗಿ ಹೆಂಡತಿ, ಅವಳ ಮಕ್ಕಳ ಸಮೇತ ಬಂದಿಳಿದ.

ಸತತವಾಗಿ ಏಳು ತಲೆಮೊರೆಗಳ ವೇದ ಘೋಷಗಳಿಂದ, ಸಂತರ್ಪಣೆಗಳಿಂದ ಅರಿಕೇಸರಿಯವರ ನಾಲ್ಕು ಕೋಟೆಯ ದೊಡ್ಡ ಮನೆಯ ಸ್ವಾಭಾವಿಕ ತೇಜಸ್ಸಿ ನೊಡನೆ, ಇಂದು ಮಕ್ಕಳ ಗಲಿಬಿಲಿ ನಗುವಿನ ಅಲೆಗಳು ಆನಂದದ ಆರ್ಭಟ

ಗಳ ಅವುಗಳ ರಮ್ಯತೆಯೂ ಸೇರಿಕೊಂಡಿತು. ದಿವಿನಾಗಿ ಕಳಕಳಸಿತು, ಆನಂದ ಸಾಗರದಲ್ಲಿ ತೇಲುತ್ತಿದ್ದ ಅರಿಕೇಸರಿ ಪಂತರು ಎರಡು ಕೈಗಳನ್ನು ಮೇಲೆತ್ತಿ ಕೃತಾರ್ಥನಾದೆ, ಕೃತಾರ್ಥನಾದೆ ಎಂದರು.

* * *

ಐದು ಗಂಟೆಗೆಲ್ಲಾ ಎದ್ದು ಊರಿಗೆ ಎರಡು ಮೈಲು ಆಚೆ ಇದ್ದ ಕಾವೇರಿಗೆ ಹೋಗಿ, ಸ್ನಾನ ಸಂಧ್ಯಾವಂದನೆಗಳನ್ನು ಮುಗಿಸಿ, ಮಡಿ ಬಟ್ಟೆಗಳನ್ನು ಕಂಕುಳಲ್ಲಿ ಸಿಕ್ಕಿಸಿಕೊಂಡು, ಕಿರು ನಾಲಗೆಯಲ್ಲೇ ಮಂತ್ರಗಳನ್ನು ಗುನುಗುತ್ತಾ ಮನೆ ಮೆಟ್ಟಿಲೇರಿದ ಗುಂಡುಪಂತರು ಹಾಗೇ ನಿಂತರು.

ಕಿರಿಯ ಸೊಸೆ "ಜಾಗೋ ಬಚ್ಚೋ!... ಹು ಆ ಸಬೇರ... ಚಿಡಿಯಾ ದೇಖೋ ಕಲರವ ಕರತೀ ಹೈ. ಓ ದೇಖೋ ಬಾಹರ್ ಪೇಡೋಂ ಪರ್ ಸಬ್ಬ್ ಉಡತೀ ಹೈ. ಮೇರೇ ಪ್ಯಾರೋಂ, ಜಮೀನ್ ಕಿ ತಾರೋಂ..., ಜಾಗೋ" ಎನ್ನುತ್ತಾ ಮಕ್ಕಳಿಗೆ ಸುಪ್ರಭಾತ ಹಾಡುತ್ತಿದ್ದಳು. ಗುಂಡೊಪಂತರು ಕ್ಷಣ ಕಾಲ ಮುಖ ಗಂಟು ಮಾಡಿದರು. ಇದೇನು ಬೆಳಗಾನ ತುರುಕರ ಭಾಷೆ!... ಇಂದು ಏನೇನು ಅನರ್ಥಗಳು ಕಾದಿವೆಯೋ ಎಂದು ವೇದ ವಿಭೂಷಣ ಗುಂಡೂ ಪಂತರು ಕ್ಷಣಕಾಲ ಅಳುಕಿದರು. ಮರು ಕ್ಷಣದಲ್ಲೇ ಚೇತರಿಸಿಕೊಂಡು, ಮನಸ್ಸಿನಲ್ಲೇ ಗಾಯತ್ರಿ ಜಪಿಸಿ, ಪಟ್ಟಣದವರು ಪಾಪ, ಗೊತ್ತಿಲ್ಲ. ಮಾರ್ಗದರ್ಶನ ಮಾಡಬೇಕು ಎನ್ನುತ್ತಾ ಒಳಕ್ಕೆ ಒಂದರು; ಕಿರಿಯ ಸೊಸೆಯನ್ನು 'ಮಗೂ, ಸುಪ್ರಭಾತಕ್ಕೆ ಈ ಅಸಹ್ಯ ಯವನ ಭಾಷೆ ಶ್ರೇಯಸ್ಸಿಲ್ಲ ರಾಮಕೃಷ್ಣಾಂತ... ಎಂದು ಹೇಳಿ ಮಲಗಿದ್ದ ಮಕ್ಕಳತ್ತ ತಿರುಗಿ "ಭೋಃ! ಬಾಲಕಾಃ, ಉತ್ತಿಷ್ಠೋತಿಷ್ಟ!. ಮುಖಂ ಪ್ರಕ್ಷಾಳಯಸ್ವ. ಏಷ ಆಹೂಯತೇ ಕುಕ್ಕುಟಃ! (ಮಕ್ಕಳೇ ಏಳಿ, ಮುಖ ತೊಳೆದುಕೊಳ್ಳಿ ಕೋಳಿ ಕೂಗುತ್ತಿದೆ) ಎಂದರು. ಮಕ್ಕಳಿಗೆ ನಿದ್ದೆಯ ಮಬ್ಬಿನಲ್ಲಿ ಎಲ್ಲಿ ಮಲಗಿರುವೆವೆಂಬ ಪರಿವೆಯೇ ಇಲ್ಲ, ಪಾತರ ಕಂಚಿನ ಕಂಠ, ಅದೇನೋ ಸಿಡಿಲು ಹೊಡೆದಂತಾಯಿತು. ಗಾಭರಿಯಿಂದ ಕಣ್ಣೆಟ್ಟರ ವಿಶಾಲವಾದ ಹಣೆ, ಹಣೆ ತುಂಬ ವಿಭೂತಿ, ತೇಜೋ ಪೂರ್ಣ ಕಣ್ಣುಗಳು, ನೀಳವಾದ ಶಿಖೆ, ಗಡ್ಡಗಳ ಗುಂಡೋಪಂತರು ಬಾಗಿ ನಿಂತಿದ್ದಾರೆ. ಪಟ್ಟಣದ ಮರಿಗಳಿಗೆ ಅವೇನೋ ಭೂತ ಕಂಡಂತೆ ಆಗಿ, ಕಿಟಾರನೆ ಕಿರುಚಿಕೊಂಡವು. ಸ್ವಲ್ಪ ಚೇತರಿಸಿಕೊಂಡು ಪಕ್ಕದಲ್ಲಿ ನಿಂತಿದ್ದ ಅಮ್ಮನನ್ನು ಅಪ್ಪಿಕೊಂಡು 'ಮಾ! ಮಾ!' ಎಂದು ಉದಯ ರಾಗ ಶುರು ಮಾಡಿದವು. ಆಕೆ ಪ್ರವೀಣೆ. ಮೈಸೂರಿನಲ್ಲಿ ಮಕ್ಕಳ ಹತ್ತಿರ ಹಿಂದಿಯಲ್ಲೇ ಮಾತಾಡಿ ರೂಢಿ

ಮಾಡಿದ್ದಳು. ಆವ್ಹೋ, ಗಾವ್ಹೋ, ಉರ್ಹೋ, ಜಾವ್ಹೋ, ಬೈಠೋ ಆದಿ ಎಲ್ಲ ಹಿಂದಿಯಲ್ಲೇ ಏಳು ತಲೆಮಾರಿನಿಂದ ಪಂತರ ವಂಶದಲ್ಲಿ ಗೀರ್ವಾಣ ಭಾರತಿ ನಲಿಯ ನರ್ತಿಸಿದ್ದಳು. ಎಲ್ಲರೂ ಸಂಸ್ಕೃತ ಪಾರಂಗತರೇ, ಈಗ ಪಟ್ಟಣ ಸೇರಿ ತಮ್ಮ ಮಕ್ಕಳು ಇಳಿದಿರುವ ಸ್ಥಿತಿ ಕಂಡು ಪಂತರು ಒಳಗೊಳಗೇ ನರಳಿದರು. ಭಾಷಾನು ಮಧುರಾ ಮುಖ್ಯಾ ಗೀರ್ವಾಣ ಭಾರತೀ' ಅಂತ ಪಂತರು ಅಂದರೆ 'ಕ್ಯೋಂ ದಾದಾಜಿ ರೋತೀ.?!' ಅನ್ನುವ ಮೊಮ್ಮಕ್ಕಳನ್ನು ಪಡೆಯುವ ಭಾಗ್ಯ ಅವರದಾಗಿತ್ತು.

ಪಂತರು 'ಪಾಹಿಮಾಮ್ ಪರಮೇಶ್ವರ, ಪಾಹಿಮಾಮ್' ಎನ್ನುತ್ತಾ ದೇವರ ಕೋಣೆಗೆ ಓಡಿದರು. ಮಂಧಾಸನದ ಮುಂದೆ ಪದ್ಮಾಸನ ಹಾಕಿಕೊಂಡು, ಪ್ರಾಣಾ ಯಾಮ ಮಾಡಿ, ಚಪ್ಪಾಳೆ ಹೊಡೆದು, 'ಉತ್ತಿಷ್ಠೋತ್ತಿಷ್ಠ ಗೋವಿಂದ' ಎಂದು ಆರಂಭಿಸುತ್ತಿರುವಲ್ಲೇ "ಮಮ್ಮಿ...ಮಮ್ಮಿ... Granny uses bathroom ಬೂದಿ for her ಹಲ್ಲು !. ..ಥೂ....ಥ... Shame We want Colgate dental ಕ್ರೀಮ್!" ಎಂದು ಬಚ್ಚಲ ಮನೆಯಿಂದ ಮದರಾಸಿನ ಮರಿಗಳು ಕೂಗುತ್ತಿದ್ದವು.

ವೇದ ವಿದ್ಯಾ ಕೋವಿದ ಗುಂಡೂಪಂತರ ನಾಲಗೆ ಅವರ ಜೀವನದಲ್ಲಿಯೇ ಮೊದಲ ಸಲ ತೊದಲಿತು, ಓತಪ್ರೋತವಾಗಿ ಹರಿಯುತ್ತಿದ್ದ ಮಂತ್ರ ಧಾಟಿ ಪ್ರಪ್ರಥಮ ಬಾರಿ ಓಲಾಡಿತು.

ದೇವರ ಪಟಗಳಿಗೆ ಮಂಗಳಾರತಿ ಮಾಡುತ್ತಿದ್ದ ಪಂತರು ಮದರಾಸು ಮರಿಗಳಿಗೆ ವಿಚಿತ್ರವಾಗಿ ಕಂಡರು ಮಮ್ಮಿ.... See, see grandpa has got a thread on his chest!...See....See" ಎಂದು ಅವು ಅಮ್ಮನ ಸೆರಗೆಳೆದಾಗ, ಆಕಳಿಸುತ್ತಾ ಹೊರ ಬರುತ್ತಿದ್ದ ಹರಿ ಧಡಾಕನೆ ಒಳಕ್ಕೆ ಓಡಿ ಹೋಗಿ ಟ್ರಂಕಿ ನೊಳಗಿಟ್ಟಿದ್ದ ಜನಿವಾರವನ್ನು ಹೊರಕ್ಕೆ ತೆಗೆದ. ಅದನ್ನು ಅವ ಕೊಳ್ಳೇಗಾಲ ದಲ್ಲಿ ಮಾತ್ರ ಪಂತರಿಗೆ ಹೆದರಿ ಹಾಕುತಿದ್ದ. ಅರಿಕೇಸರಿ, ಪ್ರತಿವಾದಿ ಭಯಂಕರ ಪಂತರಿಗೆ ಇದರ ಸುಳಿವೇನಾದರೂ ಹತ್ತಿದ್ದರೆ ಆ ಕ್ಷಣ ವಿಷಪ್ರಾಶನ ಮಾಡಿ 'ಓಂ' ಎಂದುಬಿಡುತ್ತಿದ್ದರು.

ಮಧ್ಯಾಹ್ನ ಊಟವಾದ ಮೇಲೆ ಪಂತರು ವಿಳ್ಳೇದೆಲೆ ಹಾಕುತ್ತಾ ಮದರಾಸಿನ ವನನ್ನು 'ಅದೇನೋ ಹರಿ... ಗಲಾಟೆ ಮದರಾಸಿನಲ್ಲಿ' ಅಂದರು.

"ಅದೇ ಅಪ್ಪಾ... ಹಾಳು ಗೌರ್ನಮೆಂಟು. ಪುಟ್ಟ ದರ್ಬಾರು. ಹಿಂದಿ ಬೇಕಂತೆ, ಇಂಗ್ಲಿಷ್ ಕೂಡದಂತೆ. Nonsense. Without English there is nothing" ಎಂದ, ಎಲೆ ಮಡಿಸುತ್ತ ಹರಿ. ಇಂಗ್ಲಿಷ್ ಇದ್ದರೆ ಎಲ್ಲ ಆಯಿತು ಎನ್ನುವ ಮತ ಆತನದು.

"ಯಾಕೇ!... Why... ರಪ್ಪಾ, ಜರ್ಮನಿಗಳಲ್ಲಿ ನಿನ್ನ ಇಂಗ್ಲೀಷೇ ಇದೆಯೇನು? What a pity!... ಇಂಗ್ಲಿಷಿನವರು ತೊಲಗಿದರೂ ಅವರ ಪಾದಧೂಳಿಯನ್ನು ನೆತ್ತಿಗೆ ಹಚ್ಕೊಂಡು ತಿರುಗು!" ಎಂದು ಆರ್ಭಟಿಸಿದ ಮೈಸೂರಿನ ಸೀತೂರಾಮು, ಹಳ್ಳೀಗಳಲ್ಲಿ ಹಸು ಹಾಲು ಕಡಿಮೆಯಾಗಿದ್ದರೂ ಫುಡ್ ಟೆಕ್ನಾಲಜಿಯಲ್ಲಿ ಕಳ್ಳೇಕಾಯಿ ಮಜ್ಜಿಗೆ, ಗೆಣಸಿನ ಸಕ್ಕರೆ ತಿಂದು ಕೊಬ್ಬಿದ್ದ ಆತ ಹಿಂದೀ ಭಕ್ತರಲ್ಲಿ ಅಗ್ರಗಣ್ಯ. ಅದಕ್ಕೆ ಫುಡ್ ಟೆಕ್ನಾಲಜಿಯಲ್ಲಿ ತುಂಬಿರುವ ಉತ್ತರದವರ ಪ್ರಭಾವ ಸ್ವಲ್ಪ ಕಾರಣವಾದರೆ, ಮನೆಯಲ್ಲಿನ ಹಿಂದೀ ಪ್ರವೀಣೆಯ ಪ್ರಭಾವವೂ ಸ್ವಲ್ಪ ಕಾರಣವಾಗಿದ್ದಿತು.

"How can you talk like that?.... Without English where is science?.... Technology?.... leave that apart... Where is your Kalidasa? Your Indian heritage? Your, culture??...." ಎಂದು ಕೋಪದಲ್ಲಿ ಬೊಬ್ಬೆಇಟ್ಟ ಹರಿ.

"ಏನೋ ಕಾಳಿದಾಸಾಂತೀಯ? ಇಂಗ್ಲಿಷಿನಲ್ಲೀನೋ ಅವ ಬರಿದಿರೋದು!!" ಎಂದು ಗಾಭರಿಯಲ್ಲಿ ಕೇಳಿದರು ಪಂತರು.

"ಸಂಸ್ಕೃತದಲ್ಲೇ ಬರೆದಿದ್ದರೂ, ನಾವೆಲ್ಲಾ ಓದಿ ಅರ್ಥಮಾಡಿಕೊಡಬೇಕಾದರೆ Only through English.... ಎಲ್ಲ ಕಾಮೆಂಟ್ರಿಗಳೂ, ಕ್ರಿಟಿಸಿಸಮ್ಸ್...."

"ನಿನ್ನ ಬುದ್ಧಿಗೆ ಮುಂಡ ಮೋಚ್ತು. ಅಂಥಾ ದೇವ ಭಾಷೆಗೆ ಈ ರೀತಿ ಅವಮಾನ ಮಾಡ್ತೀಯಲ್ಲೋ, ನನಗೆಲ್ಲಿನ ಇಂಗ್ಲಿಷ್ ಬರುತ್ತೋ? ಕಾಳೀದಾಸನ ಕರತಲಾಮಲಕ ಮಾಡಿಕೊಂಡಿದೀನಲ್ಲೋ" ಎಂದು ಗುಂಡುಮಂತರು ಕಳಕಳಿಯಿಂದ ಕೂಗಿದರು.

"ನಿನಗೆಲ್ಲ ಗೊತ್ತಾಗೋಲ್ಲಪ್ಪ!.... ಕಾಳಿದಾಸನ text ಒದಿದರೆ ಏನೂ ಉಪಯೋಗವಿಲ್ಲ. ಅದನ್ನ ಓದದೇನೇ Only through critical studies which are of course available only in English...." ಎಂದು ಮನಸ್ಸಿನಲ್ಲೇ ಅಂದುಕೊಂಡು ಸಿಡುಕು ಮೋರೆಯೊಡನೆ ಮನೆ ಹೊರಗೆ ಬಂದು ಜಗಲಿಯ ಮೇಲೆ ಕುಳಿತರು. ಇತ್ತ ಮದರಾಸಿಗೂ ಮೈಸೂರಿಗೂ ಬಿರುಸಿನ

ವಾಗ್ವಾದ ಶುರುವಾಗಿ, ಬಿರು ನುಡಿಗಳು ಸಿಡಿಲಿನಂತೆ ಜಗಲಿಯ ಮೇಲೆ ಕುಳಿತ ಪಂತರಿಗೆ ಹೊಡಿಯತೊಡಗಿತು.

ಪಂತರು ಇಲ್ಲದ್ದು ನೋಡಿ ಶ್ರೀಮತಿಗಳೂ ಮೆಲ್ಲನೆ ಅಖಾಡಾಕ್ಕೆ ಇಳಿದು ಧ್ವನಿ ಸೇರಿಸಿದರು. ಮದರಾಸಿನ ಅಮ್ಮನವರಿಗೆ ಇಂಗ್ಲಿಷ್ ಅಂದರೆ ಪಂಚ ಪ್ರಾಣ. ಅವರಿಗೆ ಇಂಗ್ಲಿಷ್ ಪಾರೆ ಆಗಿಲ್ಲದಿದ್ದರೂ, ಅವರಿವರ ಬಳಕೆಯಿಂದ ಅರ್ಧಂಬರ್ಧ ಇಂಗ್ಲಿಷ್ ಕಲಿತು, "I send my childrens only to convents" ಎಂದು ಮಾತು ಮಾತಿಗೂ ಇಂಗ್ಲಿಷನ್ನು ಕೊಲ್ಲುತ್ತಿದ್ದರು. ಮುದ್ದು ಮಕ್ಕಳು ಮುಮ್ಮಿ, ಮುಮ್ಮಿ ಎಂದರೆ ಈಗ ಹಮ್ಮಿನಿಂದ ಉಬ್ಬುತ್ತಿದ್ದಳು.

ಶ್ರೀಮತಿ ಮೈಸೂರು ಮೊದಲೆ ಹೇಳಿದಂತೆ ಹಿಂದಿ ಪ್ರವೀಣೆ. 'ರಾಷ್ಟ್ರಭಾಷಾ ಹೋ ಹಿಂದೀ.... ಎಂದು ಯಾವಾಗಲೂ ಹಾಡುವ ಹೆಣ್ಣು. ಕೇವಲ ಹಿಂದೀ ಸಿನಿಮಾ. ಬರೀ ಹಿಂದೀ ಪತ್ರಿಕೆಗಳು. ಅವಳು ಈಗ ಹೇಗೆ ಸುಮ್ಮನಿರುವಳು ? ತನ್ನ ಹಿಂದಿ ವರಸೆಯನ್ನು ಶುರು ಮಾಡಿಯೇ ಬಿಟ್ಟಳು. 'ದೇಖ್ ತೇರಿ ಇನ್‌ಸಾನ್ ಕಿ ಹಾಲತ್ ಕ್ಯಾ ಹೋಗಯ.... ಹಾಯ್ ಭಗವಾನ್' ಎಂದು ಮದರಾಸಿನವಳತ್ತ ಬೊಟ್ಟು ಮಾಡಿ ಕರ್ಕಶವಾಗಿ ಕಿರುಚಿದಳು ಆಕೆ, ''Oh God, save me....' ಎನ್ನುತ್ತಾ ಸೆರಗನ್ನು ಸಿಕ್ಕಿಸಿಕೊಂಡು ಎದ್ದೇ ಬಿಟ್ಟಳು ಕುಸ್ತಿಗೆ.

ಜಗಲಿಯಿಂದ ಒಳಕ್ಕೆ ಪಂತರು ಓಡಿಬರದೇ ಇದ್ದರೆ ಅನರ್ಥವಾಗಿಬಿಡು ತ್ತಿತ್ತು. ಸಂಜೆ ಶ್ರೀಮತಿ ಮತ್ತು ಶ್ರೀ ಮದರಾಸು ಮರಳೀಗುಡಕ್ಕೆ ಸವಾರಿ ಹೊರಟರು ಮಗಿಗಳು "Grandpa !....You also come man !.... ಮುಮ್ಮಿ...ಡ್ಯಾಡಿ, Call grandpa also to Maraligudda !" ಎಂದು ಗೋಳಾಡಿದವು.

ಶ್ರೀಮತಿ ಮತ್ತು ಶ್ರೀ ಮೈಸೂರಿನ ಸವಾರಿ ತೋಟದತ್ತ ಹೋಯಿತು. ಮಕ್ಕಳು "ದಾದಾಜಿ, ತುಂ ಭೀ ಆನಾ...ಪಾಸಾಬಾಂ ಹಮಾರಾ ದೇಖ್‌ನಾ" ಎಂದು ಪಂತರನ್ನು ಎಳೆದಾಡಿದವು.

ಇನ್ನು ಗಾಯತ್ರಿಯ ಮಗ ನೃಪತುಂಗ. ಅಗ್ರಹಾರದ ಹೈಕಳನ್ನೆಲ್ಲಾ ಮನೆ ಜಗಲಿ ಮೇಲೆ ಕೂಡಿಸಿ 'ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ ಎಂದು ಹಾಡು ಹೇಳಿಸಿ, ಜಾನಪದ ನೃತ್ಯ ಮಾಡಿಸುತ್ತಿದ್ದವನು, ಮೈಸೂರು, ಮದರಾಸು ಹೊರ ಹೊರಟಿದ್ದು ಕಂಡು, ಆಳ್ ಕನ್ನಡ ತಾಯ್, ಬಾಳ್ ಕನ್ನಡ ತಾಯ್

ಎಂದು ಘರ್ಜಿಸಿ, ಕೇರಿ ಹುಡುಗರನ್ನೆಲ್ಲಾ ಜೊತೆ ಮಾಡಿಕೊಂಡು "ತಾತ, ಕನ್ನಡಿಗರ ಕಾವೇರಿ ತಾಯಿಯನ್ನು ನೋದಿಕೊಂಡು ಬರುವಾ...ಬಾ" ಎಂದು ಗಲಾಟೆ ಮಾಡಿದ. ಕೇರಿ ಹುಡುಗರು ಕೆಟ್ಟ ಸ್ವರದಲಿ 'ಕನ್ನಡದಾ ಕಾವೇರಿ ತಾಯಿ' ಎಂದು ಹಾಡಲು ಶುರು ಮಾಡಿದವು.

ಅರಿಕೇಸರಿ, ಪ್ರತಿವಾದಿ ಭಯಂಕರ ವೇದ ವಿದ್ಯಾ ಪಾರಂಗತ ಗುಂಡೂ ಪಂತರು 'ಕಾಲಾಯ ತಸ್ಮೈ ನಮಃ' ಎಂದು ತೊಟ್ಟಿಯ ಮುಂದೆ ಕುಸಿದರು.

ನಾನು–ಅವರು

—ಅ.ರಾ. ಮಿತ್ರ

ಎದುರು ಮನೆ ಸುಂದರಿಯು ಇಡುತಿಹಳು ರಂಗೋಲಿ
ಹಾಕಿಕೊಂಡೇ ಇಲ್ಲ ಒಳಕುಪ್ಪಸ
ನಟ್ಟ ಕಣ್ಣಿಂದಲೇ ಅತ್ತ ಕಡೆ ನೋಡುತಿರೆ
ಶುರುವಾಯ್ತು ನನಗೂನು ಒಳಗುಬ್ಬಸ

ಗ್ರಹಚಾರ! ಎದುರು ಮನೆ ಗಂಡಸೂ ಪ್ರತ್ಯಕ್ಷ
ಸಧ್ಯ ನೋಡಲೆ ಇಲ್ಲ ನನ್ನ ಕಡೆಗೆ!
ನನ್ನ ಮನೆಯಾಕೆ ಬಲು ಮುಜುಗರದಿ ಪಸೆಹಾಕಿ
ಸೆರಗಿಕ್ಕಿ ಓಡಿದಳೆ ಮನೆಯ ಕಡೆಗೆ!

23

ಟೆಲಿ ಫಿಲಂ

— ಶಿವು

ಸಮಯ—ಸಂಜೆ. ಸ್ಥಳ—ಕ್ಲಬ್ಬಿನ ಹುಲ್ಲುಗಾವಲು. ಅಲ್ಲಲ್ಲಿ ಹರಡಿದ್ದ ಬೆತ್ತದ ಕುರ್ಚಿಗಳ ಮೇಲೆ ಮಿತ್ರ ವೃಂದ ಸುಖಾಸೀನರಾಗಿ ಬಿಸಿ ಬಿಸಿ ಚರ್ಚೆ ನಡೆಸಿದ್ದಾರೆ. ಚರ್ಚೆಯ ವಿಷಯ—ದಿನೇದಿನೇ ಕುಂದುತ್ತಿರುವ ಟಿ. ವಿ. ಕಾರ್ಯಕ್ರಮಗಳ ಗುಣಮಟ್ಟ.

"ನಾನಂತೂ ಈ ಒಂಭತ್ತು ಘಂಟೆ ಸೀರಿಯಲ್‌ಗಳನ್ನ ನೋಡೋದು ನಿಲ್ಲಿಸಿ ಯಾವ ಕಾಲವಾಯಿತೋ. ಯಾಕೆ ಹೀಗೆ ಬೋರಿಂಗ್ ಕಾರ್ಯಕ್ರಮಗಳನ್ನ ಬಿತ್ತರಿಸುತ್ತಾರೋ, ದೇವ್ರೇ ಬಲ್ಲ" ರಮೇಶ ತನ್ನ ಅನಿಸಿಕೆ ವ್ಯಕ್ತಪಡಿಸಿದ.

"ಹಮ್ ಲೋಗ್, ನುಕ್ಕಡ್, ಯೇ ಜೋ ಹೈ ಜಿಂದಗಿ, ಅವನ್ನೆಲ್ಲಾ ನೋಡಿದ ಮೇಲೆ ಈಗ ಬರ್ತ್ತಿರೋವೆಲ್ಲಾ ಬರೀ ಗೋಳಿನ ಕಥೆಗಳು ಅನ್ಸುತ್ತಪ್ಪ" ಅರುಣ ರಮೇಶನ ಮಾತನ್ನ ಅನುಮೋದಿಸಿದ.

"ಈ ಮಂಡಿ ಹೌಸ್ ಮಂದಿ ಮಂಡೇಲಿ ಬರೀ ಮಣ್ಣು ತುಂಬಿಕೊಂಡಿರೋ ಹಾಗೆ ಕಾಣುತ್ತೆ. ಮೊನ್ನೆ ಪ್ರಣಾಯ್ ರಾಯ್ ಬೆಂಗಳೂರಿಗೆ ಬಂದಿದ್ದಾಗ ಹೇಳ್ತಿದ್ದ ಅವನ ವರ್ಲ್ಡ್ ದಿಸ್ ವೀಕ್‌ಗೆ ಮೊದಲು, ಹದಿಮೂರು ಇನ್‌ಸ್ಟಾಲ್‌ಮೆಂಟ್‌ಗಳಲ್ಲೇ ಮುಗಿಸಬೇಕು ಅಂತ ಆದೇಶ ಕೊಟ್ಟಿದ್ರಂತೆ. ಹದಿನಾಲ್ಕನೆಯ ವಾರ, ಮಹಾ ಪ್ರಳಯ ಆಗಿ ವರ್ಲ್ಡ್‌ನ ನ್ಯೂಸ್ ಎಲ್ಲಾ ಖತಂ ಆಗುತ್ತೆ ಅಂತ ಗುಮಾನಿ ಇತ್ತೋ, ಏನೋ ಅವರಿಗೆ" ರೆಡ್ಡಿ ಒಂದು ಫ್ರೆಷ್ ಬಿಟ್ ಆಫ್ ಇನ್‌ಫರ್ಮೇಷನ್ ಸೇರಿಸಿದ.

ಕ್ಲಬ್ಬಿನ ಪೋರ್ಟಿಕೋ ಹತ್ತಿರ ದೇವು ಕಾಣಿಸಿಕೊಂಡ. ಅವ ಬಂದು ತನ್ನ ಕುರ್ಚಿಯಲ್ಲಿ ಕೂರೋವರೆಗೂ ನಮ್ಮ ಸಭೆಯಲ್ಲಿ ಒಂದು ಬಗೆಯ ಕುತೂಹಲ ಭರಿತ ನೀರವತೆ. ದೇವು ಬೀರು ಹೀರುತ್ತಿದ್ದಾಗ ಅರುಣ,

"ಈ ಟಿ. ವಿ. ಪ್ರೊಗ್ರಾಂಗಳ ಕ್ವಾಲಿಟಿ ಬಗ್ಗೆ ಮಾತಾಡ್ತಾ ಇದ್ವು, ದೇವು. ನಿನ್ನ ಫೇವರೆಟ್ ಕಾರ್ಯಕ್ರಮ ಯಾವ್ದು ಹೇಳ್ತೀಯಾ ?" ಅಂತ ಕೇಳಿದ. ದೇವು ಗಂಟಲು ಸರಿಸಡಿಸಿಕೊಂಡು ಶುರು ಹಚ್ಚಿದ.

"ಅರುಣ ನನ್ನ ಫೇವರೆಟ್ ಕಾರ್ಯಕ್ರಮ ರೋಮನ್ ಹಾಲಿಡೆ. ಆದ್ರೆ ಅದು ವಿ.ಸಿ.ಆರ್. ಮೂಲಕ ಟಿ.ವಿ.ಗೆ ಬರುತ್ತೆ, ಅಷ್ಟೆ. ದೂ. ದ. ದವರು ಬಿತ್ತರಿಸೋ ಕಾರ್ಯಕ್ರಮಗಳಲ್ಲಿ ಅತ್ಯಂತ ಮನರಂಜನೆ ಕೊಡೋ ಕಾರ್ಯಕ್ರಮಗಳು ಅಂದ್ರೆ ಇಂಗ್ಲಿಷ್ ಮತ್ತು ಹಿಂದಿ ವಾರ್ತೆಗಳು. ಆದ್ರೆ ಅದರ ಸ್ವಾರಸ್ಯ ಸವೀಬೇಕಾದ್ರೆ, ಸೌಂಡ್‌ನ ಆಫ್ ಮಾಡಿ, ಕೋಮಲ್ ಜೆ. ಬಿ. ಸಿಂಗ್, ಮಿನು, ಗೀತಾಂಜಲಿ ಅವರ ಕಣ್ಣು ರೆಪ್ಪೆಗಳ ಮೇಲೆ ಒಂದು ಥೀಸಿಸ್ ಬರೆಯೋದನ್ನ ಯೋಚಿಸ ಬೇಕು. ಸೀರಿಯಲ್, ಟೆಲಿ ಫಿಲಂಗಳ ಬಗ್ಗೆ ಮಾತಾಡ್ದೇ ಇದ್ದಷ್ಟೂ ಕ್ಷೇಮ"

ದೇವು ಮಾತು ಇಷ್ಟು ಬೇಗ ಮುಗಿಯುತ್ತೆ ಅಂತ ಅರುಣ ನಿರೀಕ್ಷಿಸಿರ ಲಿಲ್ಲ. ಇನ್ನೂ ಕೆದಕಿದ.

"ಅಲ್ಲಾ ದೇವು. ಹೇಳಿ ಕೇಳಿ ನೀನು ಸ್ಕ್ರಿಪ್ಟ್ ರೈಟರ್. ನಿನ್ನ ಐಡಿಯಲ್ ಟೆಲಿ ಫಿಲಂ ಹೇಗಿರುತ್ತೆ ಹೇಳ್ತೀಯ?"

ದೇವು ಕಣ್ಣಲ್ಲಿ ಹೊಳಪು ಕಂಡಿತು. ತನ್ನ ಫೇವರೆಟ್ ಟಾಪಿಕ್ ಸಿಕ್ಕಿದ ಖುಷಿ ಅವನ ಕಣ್ಣಂಚಿನಲ್ಲಿ ಕಾಣುತ್ತಿತ್ತು.

"ಅದಕ್ಕೇನು. ಧಾರಾಳವಾಗಿ ಹೇಳ್ತೀನಿ. ಕೇಳಿ.

ಟೆಲಿ ಫಿಲಂಗೆ ನನ್ನ ಫಾರ್ಮುಲಾ ಬಹು ಸಿಂಪಲ್. ಇದು ತ್ರೀ ಪಾಯಿಂಟ್ ಫಾರ್ಮುಲ. ಒಂದು : ವಿಷಯ ಟಾಪಿಕಲ್ ಆಗಿರಬೇಕು. ಎರಡು : ಸೆಕ್ಸ್ ಅಪೀಲ್ ಇರ್ಲೇಬೇಕು. ಮೂರು : ಹತ್ತು ವರ್ಷದ ಮೆಂಟಲ್ ಏಜ್‌ಗೆ ಅರ್ಥ ಆಗೋ ಹಾಗಿರಬೇಕು. ಸ್ವಲ್ಪ ತಡೀರಿ....ಅಂಥ ಒಂದು ಸ್ಕ್ರಿಪ್ಟ್ ಕಣ್ಣ ಮುಂದೆ ಬರ್ತಾ ಇದೆ...."

Scene Opens ·

ಶ್ರೀನಗರ್ ವಿಮಾನ ನಿಲ್ದಾಣ. ರಿ–ಇನ್ಸ್ಪೆಕ್ಟ್ ಮಾಡಿರೋ ಏರ್‌ಬಸ್ A-320 ವಿಮಾನ, ಹೊರಡುಕ್ಕೆ ಸಿದ್ಧವಾಗಿದೆ. ವಿಮಾನದ ಬಾಗಿಲಲ್ಲಿ ಸ್ಪುರದ್ರೂಪಿ ಗಗನ ಸಖಿ, ಚಾರುಲತಾ, ಕೈ ಮುಗಿದು, ಪ್ಲಾಸ್ಟಿಕ್ ಮೆಲು ನಗೆಯೊಂದನ್ನು ಮುಖಕ್ಕಂಟಿಸಿಕೊಂಡು ನಿಂತಿದ್ದಾಳೆ. ಏರು ಏಣಿಯ ಮೇಲೆ ಒಂದೇ ರೀತಿಯ ಖಾದಿ ಜುಬ್ಬಾ, ಖಾದಿ ಪಾಯಿಜಾಮ, ಖಾದಿ ಟೋಪಿ ಧರಿಸಿದ ಐವತ್ತು ಗಡ್ಡಧಾರಿಗಳು ಒಬ್ಬೊಬ್ಬರಾಗಿ ಹತ್ತುತ್ತಿದ್ದಾರೆ. ಎಲ್ಲರ ಕೈಯಲ್ಲೂ ಒಂದೊಂದು ಹೊಸಾ ಹೊಸ 'ಡಿಸ್ಕವರಿ ಆಫ್ ಇಂಡಿಯಾ' ಕಾಪಿ. ಎಲ್ಲರ ಜುಬ್ಬದ ಜೇಬಿನ ಬಳಿ ಒಂದು ತ್ರಿವರ್ಣ ಧ್ವಜ......ಕಟ್.

Next scene ......

ವಿಮಾನ ಹಾರ್‍ತಾ ಇದೆ. ಖಾದಿ ಗುಂಪಿನ ಮುಖಂಡನ ಮುಖ ವ್ಯಗ್ರ ವಾಗಿದೆ. ಆತ ಹಲ್ಲು ಕಡಿಯುತ್ತಿದ್ದಾನೆ. ವಾಸ್ತವವಾಗಿ ಆತ ಕಾಶ್ಮೀರೀ ಟೆರರಿಸ್ಟ್ ಮುಖಂಡ. ತನ್ನ ಸಹ ಟೆರರಿಸ್ಟ್‌ಗಳೊಂದಿಗೆ, ಅಖಿಲ ಭಾರತ ಟೆರರಿಸ್ಟ್ ಸಮ್ಮೇಳನದಲ್ಲಿ ಭಾಗವಹಿಸಲು ಮದ್ರಾಸಿಗೆ ಹೊರಟಿದ್ದಾನೆ. ವಿಮಾನದಲ್ಲಿ ಪ್ರಯಾಣ ಮಾಡುವಾಗ ಸ್ಟೆನ್ ಗನ್ ಹಿಡ್ಕೊಂಡು ಬರಬೇಡಿ, ಮಫ್ತಿಯಲ್ಲಿ ಬನ್ನಿ ಅಂತ ತನ್ನ ಅನುಚರರಿಗೆ ಹೇಳಿದ್ದು ನಿಜ. ಆದರೆ ಎಲ್ಲರೂ ತನ್ನ ಮಫ್ತಿಯನ್ನೇ ಚಾಚೂ ತಪ್ಪದೇ ಅನುಕರಿಸುತ್ತಾರೆಂದು ಆತ ಕನಸಿನಲ್ಲೂ ಎಣಿ ಸಿರಲಿಲ್ಲ. ಈಗ ಅಪರ ಗುಂಪು ಎದ್ದು ಕಾಣುತ್ತಿದೆ. ಅದೇ ಅವನ ಕೋಪಕ್ಕೆ ಕಾರಣ.

Next Scene ....

ಗಗನ ಸಖಿ ಚಾರುಲತಾ, ತನ್ನ ನೀಳ ತೋಳುಗಳಲ್ಲಿ ಟೀ ಟ್ರೇ ಹಿಡಿದು, ಬಿಂಕದಿಂದ, ನಮ್ಮ ಖಾದಿ ಮುಖಂಡನೆಡೆಗೆ ನಡೆದು ಬರುತ್ತಿದ್ದಾಳೆ. ಚಾರು ಅಸ್ಸಾಮಿನ ಸುಂದರಿ. ಗವಹಾಟಿಯಲ್ಲಿ ಬ್ಯೂಟಿ ಕ್ವೀನ್ ಪದಕ ಪಡೆದು ವಿಮಾನ ಸಂಸ್ಥೆ ಸೇರಿದ್ದಳು. ಆಕೆಯ ಚಿಕ್ಕಪ್ಪ 'ಉಲ್ಫ' ಮುಖಂಡ. ಖಾದಿ ಗುಂಪಿನವರು ಕಾಶ್ಮೀರೀ ಟೆರರಿಸ್ಟ್‌ಗಳೆಂದು, ಅವರ ತ್ರಿವರ್ಣ ಧ್ವಜ ನೋಡಿಯೇ ಊಹಿಸಿರುತ್ತಾಳೆ, ಜಾಣೆ ಚಾರು. ಅವಳಿಗೆ ಟೆರರಿಸ್ಟ್‌ಗಳೆಂದರೆ ವ್ಯಾಮೋಹ. ಈ ಕಾಶ್ಮೀರೀ ಟೆರರಿಸ್ಟ್‌ನ ಆಟೋಗ್ರಾಫ್. ಗಳಿಸುವುದು ಅವಳ ಜೀವನದ ಗುರಿ.

ಟೀ ಟ್ರೇ ಮುಂದೆ ಹಿಡಿದು ಚಾರು ಖಾದಿ ಮುಖಂಡನಿಗೆ ಮೆಲು ನಗೆ ಬೀರುತ್ತಾಳೆ. ಈ ಬಾರಿ, ಅದರಲ್ಲಿ ಪ್ಲಾಸ್ಟಿಕ್ ಅಂಶ ಖಂಡಿತ ಇರುವುದಿಲ್ಲ.

"ನೀವು ಟೆರರಿಸ್ಟ್ ಮುಖಂಡರೆಂದು ನನಗೆ ಗೊತ್ತು. ನಿಮ್ಮನ್ನು ಕಂಡರೆ ನನಗೆ ಗೌರವ, ಪ್ರೇಮ ಮತ್ತೆ ಇನ್ನೇನೋ. ದಯವಿಟ್ಟು ನಿಮ್ಮ ಆಟೋಗ್ರಾಫ್ ಕೊಡುತ್ತೀರ? ಅಂದ ಹಾಗೆ ನಾನು ಚಾರುಲತಾ. ಆದರೆ ನೀವು ನನ್ನನ್ನ ಚಾರು ಅಂತ ಕರೀಬಹುದು" ಚಾರುವಿನ ದನಿಯಲ್ಲಿ ಮಾರ್ದವತೆ, ಕಾತರ. ಖಾದಿ ಮುಖಂಡ ಒಂದು ಕ್ಷಣ ಅವಾಕ್ಕಾದರೂ ಚೇತರಿಸಿಕೊಳ್ಳುತ್ತಾನೆ.

"ಭಲೇ! ಅಂತೂ ಕಂಡುಹಿಡಿದು ಬಿಟ್ಟರಲ್ಲಾ, ಈ ಪೆದ್ದು ನನ್ನ ಮಕ್ಕಳಿಗೆ ಮಫ್ತಿಯಲ್ಲಿ ಬನ್ನಿ ಅಂದ್ರೆ ಎಲ್ಲಾ ನನ್ನ ಥರಾನೇ ಬಟ್ಟೆ ಧರಿಸಿ ಕೆಲಸ ಕಡಿಸಿ

ಬಿಟ್ಟಿದ್ದಾರೆ. ಅಂದ ಹಾಗೆ ಚಾರು ಅವರೇ, ಟೆರರಿಸ್ಟ್‌ಗಳ ಬಗ್ಗೆ ನಿಮ್ಮ ಸಹಾನುಭೂತಿ ಮತ್ತು ಅಭಿಮಾನಕ್ಕೆ ಕಾರಣ ಕೇಳಬಹುದೇ ?"

ಚಾರು ಒಮ್ಮೆ ಕತ್ತು ಕೊಂಕಿಸಿ, ಏಲ್‌ನಲ್ಲಿ ಯಾರೂ ಇಲ್ಲದ್ದನ್ನು ಖಚಿತ ಪಡಿಸಿಕೊಂಡು, ಹಾರಾಡುತ್ತಿದ್ದ ತನ್ನ ಮುಂಗುರುಳನ್ನು ಮೇಲಕ್ಕೆ ಒರೆಸಿ ಕೊಂಡು, ತನ್ನ ಕೆಂದುಟಿಗಳನ್ನು ಖಾದಿ ಮುಖಂಡನ ಕಿವಿಯ ಬಳಿ ತಂದು "ಉಲ್ಫ" ಎಂದು ಪಿಸುಗುಟ್ಟುತ್ತಾಳೆ.

ಖಾದಿ ಮುಖಂಡನ ಮುಖ ಪ್ರಸನ್ನವಾಗುತ್ತದೆ. ಅವನ ಕಿವಿಯಲ್ಲಿ ಚಾರು ಉಸುರಿದ "ಉಲ್ಫ" ಅವನ ಮಿದುಳು ಸೇರುವ ವೇಳೆಗೆ "ಉಲ್ಫತ್" ಆದರೆ ಅದಕ್ಕೆ ಚಾರು ಹೊಣೆಯೇ ?

Next scene ....

ಒಮ್ಮೆಲೇ A 320 ಯ ಪಬ್ಲಿಕ್ ಅಡ್ರೆಸ್ ಸಿಸ್ಟಮ್ ಎಚ್ಚರಗೊಳ್ಳುತ್ತದೆ. "ಇದು ನಿಮ್ಮ ಕ್ಯಾಪ್ಟನ್ ಆರ್ಮುಗಂ ಮಾತಾಡ್ತಿರೋದು. ಗಮನವಿಟ್ಟು ಕೇಳಿ. ಈ ವಿಮಾನ ಮದ್ರಾಸಿಗೆ ಹೋಗುತ್ತಿದೆ ಅಂತ ನೀವೇನಾದ್ರೂ ತಿಳಿದಿದ್ರೆ, ನಿಮ್ಮ ತಿಳುವಳಿಕೇನ ತಕ್ಷಣ ಬದಲಿಸಬೇಕಾಗುತ್ತದೆ. ನಾನು ಎಲ್. ಟಿ. ಟಿ. ಇ ಟೈಗರ್ ಕಿಟ್ಟುವಿನ ಬಲಗೈ ಟೈಗರ್ ಆರ್ಮುಗಂ. AITCನ ಮದ್ರಾಸ್ ಬದಲು ಜಾಫ್ನಾದಲ್ಲಿ ನಡೆಸ್ತೀವೆ ಅಂತ ಒಳ್ಳೇ ಮಾತಿನಲ್ಲಿ ಹೇಳಿದ್ರೆ ಕೇಳಲಿಲ್ಲ. ಹಾಗಾಗಿ ಈ ಹೈಜಾಕ್ ಅನಿವಾರ್ಯ. ನಿಮ್ಮ ಪ್ರಯಾಣ ಸುಖಕರವಾಗಲಿ"

ಚಾರು. ಖಾದಿ ಮುಖಂಡ, ಖಾದಿ ಬ್ರಿಗೇಡ್, ಎಲ್ಲಾ ಥಂಡಾ.

Next scene........

ವಿಮಾನ ಇಳಿಯುತ್ತಿದೆ. ಪ್ರಯಾಣಿಕರೆಲ್ಲಾ ಜಾಫ್ನಾವನ್ನು ಮೊದಲ ಬಾರಿ ನೋಡಲು ಕಾತರರಾಗಿದ್ದಾರೆ. ಆದರೆ.... ಇದೇನಾಶ್ಚರ್ಯ! ವಿಮಾನ ನಿಲ್ದಾಣದ ಮೇಲೆ ಮೀನಂಬಾಕ್ಕಂ, ಮದ್ರಾಸ್ ಅಂತ ಬರೆದಿದೆ.

ಚಾರು, ಪೈಲಟ್ ಕ್ಯಾಬಿನ್ನಿಗೆ ಹೋಗುತ್ತಾಳೆ. ಕಾಕ್‌ಪಿಟ್‌ನಲ್ಲಿ ಆರ್ಮುಗಂ ತಲೆ ಚಚ್ಚಿಕೊಳ್ಳುತ್ತಾ "ಸರ್ವ ನಾಶ, ಸರ್ವ ನಾಶ" ಅಂತ ಕೂಗಾಡುತ್ತಿದ್ದಾನೆ.

ಜಾರಿದ ಸೆರಗನ್ನು ಸರಿಪಡಿಸಿಕೊಳ್ಳುತ್ತಾ ಚಾರು, "ಏನಾಯ್ತು ಕ್ಯಾಪ್ಟನ್ ?" ಅಂತ ಮೆಲು ದನಿಯಲ್ಲಿ ಕೇಳುತ್ತಾಳೆ.

"ಈ ಪಾಳು A 320, ಇದು Fly by wire ಅನ್ನೋದನ್ನ ಮರೆತೇ ಬಿಟ್ಟಿದ್ದೆ. ಇದರ ಕಂಪ್ಯೂಟರ್ ಪ್ರೋಗ್ರಾಂನಲ್ಲಿ ಮದ್ರಾಸ್ ಅಂತ ಮೊದಲೇ ಬರೆದಿತ್ತು. ನಾನೆಷ್ಟು ಪ್ರಯತ್ನ ಮಾಡಿದರೂ, ಲಾಯಕ್ಕೆ ಹೊರಟಿದ್ದ ಕುದುರೆಯಂತೆ ಈ ವಿಮಾನ ಮದ್ರಾಸಿನಲ್ಲೇ ಇಳಿದುಬಿಟ್ಟಿದೆ. ಕಿಟ್ಟುಗೆ ನಾನು ಏನು ಹೇಳಲಿ ?"

ದೇವುವಿನ ಭಾವನಾ ಲಹರಿ ಇನ್ನೂ ನಿರರ್ಗಳವಾಗಿ ಹರಿಯುತ್ತಿತ್ತೇನೋ. ಅಷ್ಟರಲ್ಲಿ, ಬೇರರ್ ಬಂದು "ಸಾರ್, ಮನೇಯಿಂದ Phone ಬಂದಿದೆ. ಅರ್ಜೆಂಟಾಗಿ ಮನೇಗೆ ಹೋಗಬೇಕಂತೆ" ಅಂತ, ಹೇಳಿ, ನಮ್ಮನ್ನೆಲ್ಲಾ ಧಿಡೀರನೆ ಬೆಂಗಳೂರಿಗೆ ತಂದ.

ಕಿರಿಯಕ್ಕರ

ವಿದ್ಯಾಧಿ ದೇವತೆ ಸರಸತಿಯು
ಆದೆಯು ನೀನೀಗ ಪರಸತಿಯು
ಉದ್ದದ ಮೊತ್ತದ ಶುಲ್ಕಗಳ
ಮುದ್ದಂತೆ ಪಂಚುವೆ ಸೀಟುಗಳ

*   *   *

ವರ ಪೇಟೆಯಲ್ಲೀದು ವೈದ್ಯೇಶನ
ಪೊರ ದೇಶದಲ್ಲಿಹ ತಾಂತ್ರಿಕನ
ಅರಸುತ ನಿಲುವರು ಹೆಣ್ಣವರು
ದರವೆಷ್ಟು ಎಂಬುದ ಲೆಕ್ಕಸರು

—ಛಂದೋ ಮಿತ್ರ

ಶೀಲಾ

— ಶಾಂತಾ ರಘು

ರಾತ್ರಿ ಹನ್ನೊಂದು ಗಂಟೆ ಇರಬಹುದೇನೋ. ಪಕ್ಕದ ಮನೆ ರಾಮರಾಯರ ಮನೆಯಲ್ಲಿ ಎಲ್ಲ ದೀಪಗಳನ್ನೂ ಹಾಕಿದ್ದಾರೆ. ಒಂದೇ ಗಡಿಬಿಡಿ, ಗಲಿಬಿಲಿ, ಜೋರಾಗಿ ಮಾತು, ಗ್ಯಾರೇಜು ಬಾಗಿಲು ತೆರೆದ ಶಬ್ದ ಎಲ್ಲ ಕೇಳಿ, ರಾಜಣ್ಣ, ಕಮಲಮ್ಮ, ಇಬ್ಬರೂ ಮುಂಬಾಗಿಲು ತೆರೆದು ಹೊರಬಂದರು. ರಾಮರಾಯರು ಕಾರ್ ಸ್ಟಾರ್ಟ್ ಮಾಡುತ್ತಾ ಇದ್ದರು. ಬಾಗಿಲಲ್ಲೇ ಕನಕಮ್ಮ ಚಡಪಡಿಸುತ್ತಾ ನಿಂತಿದ್ದರು. ಬಲು ಗಾಭರಿಯಾಗಿದ್ದರು. ಸೆರಗಿನಿಂದ ಎಡೆಬಿಡದೆ ಬೆವರೂರಸಿ ಕೊಳ್ಳುತ್ತಾ ಇದ್ದರು. ಕಾಂಪೌಂಡ್ ಹತ್ತಿರ ಬಂದು ನಿಂತ ಕಮಲಮ್ಮ–

"ಏನ್ ಕನಕಮ್ಮ ? ಏನ್ಸಮಾಚಾರ ? ಗಾಭರಿಯಾಗಿದೀರಲ್ಲ ? ಎಲ್ರೂ ಹುಷಾರಾಗಿದಾರೆ ತಾನೆ ?" ಅಂತ ವಿಚಾರಿಸಿದ್ರು.

"ಏನ್ ಹೇಳಲಿ ಕಮಲಮ್ಮ ? ನಮ್ ಶೀಲೂಗೆ ನೋವು ಶುರು ವಾಗಿದೆ ಕಣ್ರೀ. ಆಸ್ಪತ್ರೆಗೆ ಹೊರಡ್ತಾ ಇದೀವಿ. ಇನ್ನೊಂದು ನಾಲಕ್ಕು ದಿನ ಕಳೀಬಹುದು ಅಂದುಕೊಂಡಿದ್ವಿ. ಅವಳು ಪಡೋ ಕಷ್ಟ ನೋಡಿದ್ರೆ ನಂಗೆ ಕೈಯೂ ಓಡ್ತಾ ಇಲ್ಲ, ಕಾಲೂ ಓಡ್ತಾ ಇಲ್ಲ. ಸಧ್ಯ ಸುಖವಾಗಿ ಮೈ ಕಳೆದು ಬಿಟ್ರೆ ಸಾಕಪ್ಪ !" ಅಂತ ಕೈ, ಕೈ ಹೊಸಕಿಕೊಂಡರು ಕನಕಮ್ಮ.

"ಏನೂ ಭಯ ಬೀಳಬೇಡಿ ಕನಕಮ್ಮ. ಚೊಚ್ಚಿಲ ಹೆರಿಗೆ ಅಲ್ವೆ. ಎಲ್ರಿಗೂ, ಆತಂಕ ಇದ್ದೇ ಇರತ್ತೆ. ಶೀಲಾಗೇನು ಆರೋಗ್ಯವಾಗೇ ಇದಾಳೆ. ಗಂಡ, ಹೆಂಡ್ತಿ ಕಣ್ಣೊಳಗಿಟ್ಟು ಮುಚ್ಚಟೆ ಮಾಡಿದೀರಾ. ದಿನಾ ಟಾನಿಕ್ಕು, ವಾರಕ್ಕೊಂದು ಸಾರಿ ತಪ್ಪದೆ ಡಾಕ್ಟರ್ ಹತ್ರ ಚೆಕಿಂಗು, ವಾಕಿಂಗು, ಯಾವು ದರಲ್ಲೂ ಅಸಡ್ಡೆ ಮಾಡಿಲ್ಲ ಬಿಡಿ" ಅಂತ ಕಮಲಮ್ಮ ಸಮಾಧಾನ ಮಾಡಿದರು.

"ಅಯ್ಯೋ ಬಿಡಿ. ನಮಗೆ ತಾನೆ ಬೇರೆ ಮಕ್ಕಳಿದಾರೆಯೆ ? ಮನೆ ತುಂಬಾ ಓಡಾಡ್ತಾ ಇದ್ದೋಳು, ಹೆರಿಗೆ ನೋವಿನಿಂದ ಹಣ್ಣಾಗೋದು ನೋಡ್ಲಾರೆ

ಕಮಲಮ್ಮ" ಅಂತ ಒಂದೇ ಸಮನೆ ಕನಕಮ್ಮ ಹಲುಬಿದರು. ಕೈ ಕಾಲೇ ಉಡುಗಿ ಹೋಗಿದ್ದರು ಪಾಪ.

"ಛೆ ಬಿಡಿ ! ಇಷ್ಟು ಅಧೈರ್ಯ ಪಡಬಾರದು. ಮನೆ ದೇವರಿಗೆ ಹರಸಿ ಕೊಳ್ಳಿ. ಮಾಗಿದ ಹಣ್ಣು ಉದುರೋ ಹಾಗೆ ಹೆರಿಗೆ ಆಗಿ ಹೋಗತ್ತೆ" ಅಂದರು ಹಲವು ಮೊಮ್ಮಕ್ಕಳನ್ನು ಕಂಡ ಕಮಲಮ್ಮ.

ಅಷ್ಟರಲ್ಲಿ ಕಾರು ತಂದು ಮುಂಬಾಗಿಲ ಹತ್ತಿರ ನಿಲ್ಲಿಸಿದರು ರಾಮ ರಾಯರು. ಒಳಗೆ ಹೋದ ಕನಕಮ್ಮ ಶೀಲಾಗೆ ಬೆಚ್ಚಗೆ ಶಾಲು ಹೊದಿಸಿದರು. ನಡೆಯಲು ಸಹ ಶ್ರಮ ಪಡುವುದನ್ನು ಕಂಡು ಗಂಡ, ಹೆಂಡತಿ ಅವಳನ್ನು ಎತ್ತಿಕೊಂಡೇ ಬಂದು ಕಾರಲ್ಲಿ ಮಲಗಿಸಿದರು. ಬುಟ್ಟಿಯಲ್ಲಿ ಫ್ಲಾಸ್ಕಿನಲ್ಲಿ ಹಾಲು, ಬ್ರೆಡ್ಡು, ಟವಲು, ಪೌಡರ್, ಬ್ರಷ್, ಎಂದು ತೋಚಿದ್ದೆಲ್ಲಾ ತುರುಕಿ ಕಾರೊಳ ಗಿಟ್ಟರು. ಮುಲುಗುಟ್ಟುತ್ತಲೇ ಇದ್ದಳು ಶೀಲೂ ಪಾಪ.

"ಬರ್ತೀನಿ ಕಮಲಮ್ಮ. ಮನೆ ಕಡೆ ಸ್ವಲ್ಪ ನೋಡ್ಕೊತೀರಾ ? ಇಕೊಳ್ಳಿ ಬೀಗದ ಕೈ. ದೇವರ ದಯದಿಂದ ಒಳ್ಳೇ ಸುದ್ದೀನ ಬೇಗ ಫೋನು ಮಾಡ್ತೀನಿ." ಅಂತ ಕನಕಮ್ಮ ಶೀಲಾ ಜತೆ ಕಾರಿನ ಹಿಂದಿನ ಸೀಟಿನಲ್ಲಿ ಕೂತರು. ಭರ್ರನೆ ಹೋಯಿತು ಅಂಬಾಸಿಡರ್ರು.

"ಪಾಪ, ಬಲು ಭಯ ಇಬ್ರಿಗೂ ಹೆದರಿ ನಡಗ್ತಾಯಿದಾರೆ ನೋಡಿ" ಅಂತ ಶುರು ಮಾಡಿದರು ಕಮಲಮ್ಮ.

"ನಾಕು ನಡಿಯೇ. ನಾನೇ ಆವಾಗ್ಲಿಂದ ನೋಡ್ತಾನೇ ಇದೀನಿ. ಅವರ ಆತೀ ರಾಗಾಲಾಪನೆಗೆ ಸರಿಯಾಗಿ ಪಿಟೀಲು ಬಾರಿಸ್ತಾನೇ ಇದೀಯಾ. ಏನು ಹೆಂಗಸರೋ !" ಅಂತ ರಾಜಣ್ಣ ಗದರಿಕೊಂಡರು.

ಬೇಗನೇ ಬಂತು ಫೋನು. ಒಂದೇ ಉಸಿರಿಗೆ ಓಡಿ ರಿಸೀವರೆತ್ತಿಕೊಂಡರು ಕಮಲಮ್ಮ.

"ಹಲೋ ! ಹಲೋ ! ಕಮಲಮ್ಮಾ ! ನಾನು ಕನಕ ಆಸ್ಪತ್ರೆಯಿಂದಾ ! ದೇವರ ದಯ. ನಾರ್ಮಲ್ ಡೆಲಿವರಿ ಕಣ್ರಿ. ಏನೂ ತೊಂದ್ರೆ ಆಗ್ಲಿಲ್ಲ !" ಅಂತ ಆ ಕಡೆಯಿಂದ ಆನಂದ ತುಂದಿಲರಾಗಿ ಕನಕಮ್ಮ ಹೇಳಿದರು.

"ಸಧ್ಯ ನಿಮ್ಮ ಆತುಕ ಕಳೀತಲ್ಲ! ಕಂಗ್ರಾಟ್ಸ್! ಗಂಡೋ, ಹೆಣ್ಣೋ ಎಂಥಾದ್ದು?"

"ಮೂರು ಗಂಡು, ಒಂದು ಹೆಣ್ಣೂರೀ! ಒಂದಕ್ಕಿಂತ ಒಂದು ಮುದ್ದು! ಅಪ್ಪ, ಅಮ್ಮನ ತರಹ ಎಲ್ಲಾ ಪ್ಯೂರ್ ಪೆಡಿಗ್ರಿ ಪಾಮರೇನಿಯನ್ಸ್!"

ವಿಷಯ ಕೇಳಿ "ಓಹೋ! ವೆಟರ್ನರಿ ಮೆಟರ್ನಿಟಿ ವಾರ್ಡಿಂದ ಬಂತೋ ಸುದ್ದಿ? ಬಾಣಂತಿ, ಮಕ್ಕಳು ಚೆನ್ನಾಗಿದಾರಂತ? ಹೋಗ್ಲಿ ಬಿಡು, ಮನೆ ಭಣ ಭಣಾಂತ ಇರತ್ತೇಂತ ಯಾವಾಗ್ಲೂ ಗೊಣಗುಡ್ತಾ ಇದ್ರು ನಿನ್ನ ಸ್ನೇಹಿತೆ ಭರ್ಜರಿ ಬಾಣಂತನ ಮಾಡಬಹುದು ಈಗ! ಮನೆ ತುಂಬಾ ಪಾಮರೇನಿಯನ್ ಮರಿಗಳು ಓಡಾಡ್ತಾ ಇರತ್ವೆ ಇನ್ಮೇಲೆ!" ಅಂದ್ರು ರಾಜಣ್ಣ.

* * *

ಪಂಚಪದಿ

'ಬರೆಯುವುದು ಹೇಗೆ ಮರಿ ಖುಷಿ ಕೊಡುವ ಪದ್ಯ?'
"ಪದ್ಯ ಮಡಿಯನು ಬಿಟ್ಟು ಆಗಲೋ ಗದ್ಯ
ಇರಬೇಕಿ ಪದ್ಯ ಲೈಟ್
ನೀನಾಗಬೇಕು ಟೈಟ್
ಪನ್ನು ರೈಬಾಲ್ಡ್ರಿ ಕ್ಲಿಕ್ಕುವುವೀಗ ಸದ್ಯ"

ಅ. ರಾ. ಸೇ.

ಅವೇ ಪದಗಳು–ಪರಿಣಾಮ ವಿಚಿತ್ರ

—ಸೀನ

ನಮ್ಮ ದಿನನಿತ್ಯದ ಜೀವನ ಜಂಜಾಟದಲ್ಲಿ ಅನೇಕ ವಾಕ್ಯಗಳನ್ನು ಪದೇ ಪದೇ ಕೇಳುತ್ತಿರುತ್ತೇವೆ. ಕೇಳುತ್ತಿರುವ ಪರಿಸ್ಥಿತಿಗನುಗುಣವಾಗಿ ಅದೇ ವಾಕ್ಯಗಳು ಸಂತೋಷವನ್ನೋ, ಗಾಬರಿಯನ್ನೋ ಹುಟ್ಟಿಸುತ್ತವೆ. ಕೆಳಗಿನ ಉದಾಹರಣೆಗಳನ್ನು ನೋಡಿ.

1. ವಾಕ್ಯ :- "ಈ ಸರ ಎಷ್ಟು ಚಂದ ಕಾಣ್ತದೆ!"

(ಸಂತೋಷ) :- ನೀವು ಮಂಗಳೂರಿನಿಂದ ಹೊಸದಾಗಿ ಮಾಡಿಸಿಕೊಂಡು ಬಂದ ಮಾವಿನಕಾಯಿ ಸರ ನಿಮ್ಮ ಪತ್ನಿಯ ಕೊರಳಿಗೆ ಹಾಕಿದಾಗ ಆಕೆಯ ಉದ್ಗಾರ.

(ಗಾಬರಿ) :- ನಿಮ್ಮ ಮಿತ್ರ ಮಂಗಳೂರಿನಿಂದ ತಂದ ಸದರಿ ಸರವನ್ನು ಆತನ ಪತ್ನಿಯ ಕೊರಳಿಗೆ ಹಾಕಿದ್ದನ್ನು ನೋಡಿ ನಿಮ್ಮ ಪತ್ನಿಯ ಉದ್ಗಾರ.

2. ವಾಕ್ಯ :- "ಸ್ವಾಮಿ, ಕೋರ್ಟಿನಿಂದ ಎವಿಕ್ಷನ್ ನೋಟೀಸ್ ತಂದೀನಿ."

(ಸಂತೋಷ) :- ನೀವು ಮನೆ ಮಾಲೀಕರಾಗಿದ್ದರೆ.

(ಗಾಬರಿ) :- ನೀವು ಬಾಡಿಗೆದಾರರಾಗಿದ್ದರೆ.

3. ವಾಕ್ಯ :- "ನಿಮಗೇನೂ ಆಗಿಲ್ಲಾರೀ. ಆದ್ರೂ ಈ ಚೀಟಿಲಿರೋ ಡಾಕ್ಟರಿಗೆ ಒಮ್ಮೆ ತೋರಿಸಿ ಬಿಡಿ"

(ಸಂತೋಷ) :- ನಿಮಗೆ ಗುಣವಾಗದ ಕಾಯಿಲೆ ಇದೆ ಎಂದು ಭಾವಿಸಿಕೊಂಡಿದ್ದು, ಚೀಟಿಯಲ್ಲಿನ ಡಾಕ್ಟರು ನೆಗದಿ ಸ್ಪೆಷಲಿಸ್ಟ್ ಅಂತ ಗೊತ್ತಾದಾಗ.

(ಗಾಬರಿ) :- ಚೀಟಿಯಲ್ಲಿನ ಡಾಕ್ಟರು ಊರಿನ ಸುಪ್ರಸಿದ್ಧ ಮಾನಸಿಕ ವೈದ್ಯರು ಅಂತ ತಿಳಿದಾಗ.

4. ವಾಕ್ಯ :- "ವಯಸ್ಸಾಗಿರೋರು ಸ್ವಲ್ಪ ಜಾಗ ಬಿಡಿ, ಸ್ವಾಮಿ"

(ಸಂತೋಷ) :- ನಿಮ್ಮ ಮಗನೊಡನೆ ನೀವು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಕಂಡಕ್ಟರ್ ನಿಮ್ಮನ್ನು ಕುರಿತು ಇತರರಿಗೆ ಹೇಳಿದ ಮಾತು.

(ಗಾಬರಿ) ;- ಅದೇ ಬಸ್ಸಿನಲ್ಲಿ, ಅದೇ ಕಂಡಕ್ಟರ್ ನಿಮ್ಮ ಮಗನನ್ನು ಕುರಿತು ಇತರರಿಗೆ ಹೇಳಿದ ಮಾತು.

5. ವಾಕ್ಯ :- "ನೀವೇನೂ ಯೋಚನೆ ಮಾಡಬೇಡಿ. ಎಲ್ಲಾ ಸರಿಹೋಗುತ್ತೆ"

(ಸಂತೋಷ) ;- ನಿಮ್ಮ ಲಾಯರ್ ನಿಮ್ಮ ಕೇಸಿನ ವಿಷಯ ನಿಮ್ಮ ಹತ್ತಿರ ಮಾತನಾಡುವಾಗ ಹೇಳಿದ್ದು.

(ಗಾಬರಿ) :- ನಿಮ್ಮ ಪ್ರತಿ ಕಕ್ಷಿ ಲಾಯರ್, ಆತನ ಕಕ್ಷಿಗೆ ಹೇಳುತ್ತಿದ್ದ ಮಾತುಗಳನ್ನು ನೀವು ಅಕಸ್ಮಾತ್ ಕೇಳಿದ್ದು.

ವಾಕ್ಯ :- "ನಾನೊಬ್ಬ ಹೆಂಗಸು. ನನ್ನ ಹಕ್ಕಿಗಾಗಿ ಎಷ್ಟಾದರೂ ಹೋರಾಡಲು ಸಿದ್ಧ"

(ಸಂತೋಷ) :- ನಿಮ್ಮ ಮಗಳು ಈ ಮಾತುಗಳನ್ನು ಘೋಷಿಸಿದಾಗ.

(ಗಾಬರಿ) :- ನಿಮ್ಮ ಪತ್ನಿ ಅದೇ ಮಾತುಗಳನ್ನು ಘರ್ಜಿಸಿದಾಗ.

ವಾಕ್ಯ :- "ಅಪ್ಪಾ, ಆಗೋ ಅಲ್ಲಿದಾಳಲ್ಲ, ಆ ಹುಡುಗೀನೇ ನಾನು ಮದುವೆ ಆಗೋದು"

(ಸಂತೋಷ) :- ಕಾನ್ವೊಕೇಷನ್‌ನಲ್ಲಿ ಚಿನ್ನದ ಪದಕವನ್ನು ಗಿಟ್ಟಿಸಿದ ಹುಡುಗಿಯನ್ನು ತೋರಿಸುತ್ತಾ ಹೇಳಿದ ಮಾತು.

(ಗಾಬರಿ) :- ಕ್ಯಾಬರೇನಲ್ಲಿ ಕೂತಿದ್ದಾಗ ಸದರಿ ಮಗ......

ಯಾರು ಎಲ್ಲಿದ್ದಾರೆ?

— ಅ. ರಾ. ಸೇ.

ಇದೇ ತಾನೇ ಕಳೆದು ಹೋದ ಕ್ರಿಸ್ತ ವರ್ಷದ ಮಹಿಮೆ ಏನೆಂದರೆ, ಯಾರು ಯಾರು ಎಲ್ಲಿ ಎಲ್ಲಿ ಇದ್ದಾರೆ ಎಂದು ತೋರಿಸಿದ್ದು.

ಮತ್ತೊಮ್ಮೆ ತುಂಬಾ ಸ್ಪಷ್ಟವಾಗಿ ಜಾತ್ಯತೀತತೆ, ಧರ್ಮ ನಿರಪೇಕ್ಷತೆ ಎಂದರೇನು ಎಂದು ಎದೆಗೆ ಒದ್ದು ಹೇಳಿತು—೧೯೯೦ನೆಯ ವರ್ಷ.

ಬಹು ಹಿಂದೆ ಅಪರಂಜಿ ಹೇಳಿದಂತೆ ಪಂಜಾಬ್, ಕಾಶ್ಮೀರದ ದೈನಂದಿನ ಕೊಲೆಗಳು ಪತ್ರಿಕೆಗಳಲ್ಲಿ ಪ್ರತಿ ದಿನ, ಬಂದು ಓದುಗರು ಅವನ್ನೋದುವ, ಓದಿದರೆ ಸ್ಪಂದನವನ್ನು ತೋರುವ ಮನೋಭಾವದಿಂದ ಆಚೆಗೆ ಏರಿದ್ದರೂ, ಇನ್ನೂ ಸ್ವಲ್ಪ ಮೇಲಕ್ಕೆ ಹೋದರು. ಸಾಲದ್ದಕ್ಕೆ ತಣ್ಣಗಾಗಿದ್ದ ಅಸ್ಸಾಂ ಅವುಗಳ ಜೊತೆಗೆ ಸೇರಿತು.

ಓದುಗರು, ಮರೆತು ಒಮ್ಮೊಮ್ಮೆ ಪತ್ರಿಕೆ ಕೊಳ್ಳುತ್ತಿದ್ದವರು, ಬೆಲೆಯನ್ನು ನೋಡಿ, ಆಳೆಗಣ್ಣುಗಳಿಂದ, ವಿಮುಖರಾದರು. ಕಡ ತೆಗೆದುಕೊಳ್ಳಲೂ ಅವಕಾಶವಿಲ್ಲ. ಪಕ್ಕದ ಮನೆಯುವರೂ ಚಂದಾದಾರರ ಪಟ್ಟಿಯಿಂದ ಹೊರಬಿದ್ದರು.

ಇನ್ನೊಂದು ವಿಷಯದಲ್ಲೂ ಜನ ಸಾಮಾನ್ಯರ ಲೆಕ್ಕಾಚಾರ ತಪ್ಪಿತು ಬೆಲೆಗಳು ತುಂಬಾ ಏರಿರುವುದರಿಂದ ಇನ್ನು ಮುಂದೆ ಏರಲಾರವು, ಏರಲೂ ಸಾಧ್ಯವಿಲ್ಲ ಎಂದೇ ಎಲ್ಲರೂ ತಿಳಿದದ್ದು ತಪ್ಪಾಯಿತು. ಬೆಲೆ ಏರುವುದಕ್ಕೆ ಬಾಹ್ಯಾಕಾಶದ ಆ ತುದಿಯೇ ಎಲ್ಲೆ ಎಂದು ತಿಳಿಯಲು ಹಿಂದೆಗೆದು ತಳಮಳಿಸುತ್ತಿದ್ದಾರೆ.

ಪೆಟ್ರೋಲಿಯಂ ಉತ್ಪನ್ನಗಳು ಪರ್ಷಿಯನ್ ಖಾರಿಯ ಸಂಕಟದಿಂದ ತುಟ್ಟಿಯಾದವು. ನಿಜ, ಒಪ್ಪೋಣ. ಆದರೆ ಈಗ ಇನ್ನೂ ಏರುತ್ತಲೇ ಇರುವುದೇಕೆ?

ಸ್ಪಾಟ್ ಮಾರ್ಕೆಟ್ ಬೆಲೆ ಇಳಿದಾಗ ನಾವೇಕೆ ಖರೀದಿಸಲಿಲ್ಲ ? ಇಲ್ಲೆಲ್ಲಾ ಆರ್ಥಿಕ ಸೂಕ್ಷ್ಮಗಳು ಅಡಗಿವೆ. ನಮಗೆ ತಿಳಿದಂತೆ ಮೂರು ನಾಲ್ಕು ವರ್ಷ ಗಳ ಹಿಂದೆಯೇ ಪಂಜಾಬ್ ಕಾಶ್ಮೀರಗಳ ವಿದ್ಯಮಾನ ಜಗಜ್ಜಾಹೀರಾಗಿತ್ತು. ನಮಗೆಲ್ಲಾ ತಿಳಿದದ್ದು, ಪತ್ರಿಕೆಗಳು ಡಂಗುರ ಹೊಯ್ದದ್ದು ಸರ್ಕಾರಕ್ಕೇಕೆ ತಿಳಿಯಲಿಲ್ಲ? ಸರ್ಕಾರಕ್ಕೆ ತಿಳಿಯದೇ ಉಂಟೇ ? ಆದರೆ ಸರ್ಕಾರ ಏನು ಮಾಡು ತ್ತಿತ್ತು ? ಹಾಗೆ ಕೇಳುವುದು ತಪ್ಪು, ಅದು ರಾಜಕೀಯ ಸೂಕ್ಷ್ಮ ಎಂದು ಹೇಳುತ್ತಾರೆ. ನಾವು ಕೇಳುತ್ತಾ ನಿಂತಿದ್ದೇವೆ.

ಪಕ್ಷವು ತನ್ನ ನಾಯಕತ್ವವನ್ನೇ ಬದಲಾಯಿಸಲು, ಗೊಂದಲವನ್ನೆಬ್ಬಿಸು ವುದು ; ಸೈನ್ಯವು ಜನ ಸಮೂಹದೆದುರು ನಿಲ್ಲುವುದು, ಅಂತರ ರಾಷ್ಟ್ರೀಯ ವಿದ್ಯಮಾನವಾದ್ದರಿಂದ, ನಮ್ಮಲ್ಲೂ ಹಾಗಿರುವುದನ್ನು ಕುರಿತು ತುಟಿಪಿಟಕ್ಕೆನ್ನು ವುದಕ್ಕೂ ಸಾಧ್ಯವಿಲ್ಲ. ಹಾಗೆ ಪಿಟಕ್ ಎಂದರೆ ಪ್ರಗತಿ ವಿರೋಧಿಗಳಾಗಿ ಬಿಟ್ಟೇವು. ಇನ್ನು ಬುದ್ಧಿ ಜೀವಿಗಳೆಂದು ತಮ್ಮನ್ನು ತಾವೇ ಕರೆದುಕೊಳ್ಳುವವರು, ಸರಕಾರದಿಂದ ಕರೆಸಿಕೊಳ್ಳುವವರು, ಜನಪರ ಜೀವಿಗಳು ಅಲ್ಲೇ ಇದ್ದಾರೆ. ಎಲ್ಲಿ ಎಂದರೆ, ಅವರು ಯಾವಾಗಲೂ ತಿಪ್ಪರಲಾಗ ಹಾಕುತ್ತಿರುವುದರಿಂದ, ಹಿಂಲಾಗ ಅಥವಾ ಮುಂಲಾಗ ಹಾಕುತ್ತಿರುವಲ್ಲಿ. ಇವರಿಗೆ ಇರುವ ಮುಖ್ಯ ಕಳಕಳಿ, ಜನತೆಗೆ ಏನು ಬೇಕು ಎಂದು ಗುರುತಿಸುವುದೋ, ಅಥವಾ ಇವರು ಹೇಳಿದ್ದೇ ಜನತೆಗೆ ಅಗತ್ಯ ಎಂಬ ಆಗ್ರಹದಲ್ಲೋ ? ತಿಳಿಯಲಾರೆವು. ತಿಳಿ ಯಲು ಸಾಧ್ಯವೂ ಇಲ್ಲ. ಕೀರ್ತಿ (ಅಪ ಅಥವಾ ಶುದ್ಧ) ವರ್ತಮಾನಕ್ಕೆ ಗ್ರಾಸ ವಾಗುವುದು ಮತ್ತು ಹಣ ದತ್ತ ಎನ್ನೋಣವೋ. ಬೇಡವೋ ? ನಮಗೇ ಅನುಮಾನ.

ಇನ್ನು ಹಲವರು ಪ್ರತಿನಿಧಿಗಳು ಅಧಿಕಾರ ಇರುವತ್ತ ಹೋಗುವುದರಲ್ಲಿ ನಿಪುಣರು,. ರಾಜಕೀಯ ಎಂದರೆ ಅಧಿಕಾರ ಗ್ರಹಣ ಎಂದು ಎಲ್ಲರೂ ಬಲ್ಲರಾ ದರೂ ಯಾರೂ ಹೇಳುವಂತಿಲ್ಲ. ಆದುದರಿಂದ ಏನಕೇನ ಪ್ರಕಾರೇಣ ಉರುಳಿಸು ವುದು—ಏರುವುದು ಎಂಬ ಪರಮ ಪದ ಸೋಪಾನ ಪಟದ ಆಟ (ಹಾವು ಏಣಿ ಆಟ)ದಲ್ಲಿ ತೊಡಗಿ ಹೇಗೋ ಮುಂದೆ ಬಂದರಾಯಿತು ಎಂಬ ಸವಲತ್ತು ಪಡೆಯು ತ್ತಾರೆ. ಆದುದರಿಂದ ಅವರನ್ನಾರಿಸಿದ ಜನತೆಯ ಹಿತ ಸಾಧಿಸುವುದು ಹೇಗೆ ? ಹಿತ ಎಂದರೇನು ಎಂದು ಕೇಳುತ್ತಲೇ ಜನ ಇರುತ್ತಾರೆ. ಈಗ ಪ್ರಶ್ನಿಸುವ ಧೈರ್ಯವೂ ಇಲ್ಲ.

ಇನ್ನು ಖಾರಿ ಸಂಕಟ, ಥ್ಯಾಚರಿಸಂ ಅಂತ್ಯಗಳನ್ನು ಬಿಟ್ಟರೆ ನಮ್ಮ ಪಾಲಿಗೆ ಭಾರೀ ವಿದ್ಯಮಾನ, ಜ್ವಲಂತ ಸಮಸ್ಯೆ ಎಂದರೆ ಶ್ರೀ ರಾಮ ಜನ್ಮ ಭೂಮಿಯದು. ಅಲ್ಲಿ ಶ್ರೀ ರಾಮನ ಗುಡಿ ಕಟ್ಟಲು ಅನೇಕ ಆಕ್ಷೇಪಣೆಗಳೆದ್ದಿವೆ. ಅವುಗಳಲ್ಲಿ ಕೆಲವನ್ನು ಪರೀಕ್ಷಿಸೋಣ.

1. ದೇವಾಲಯ ಕಟ್ಟುವುದು, ಕೆಡವಿ ಹಾಕುವುದು ಇದರಲ್ಲಿ ಅರ್ಥವಿಲ್ಲ. ಹೃದಯದಲ್ಲಿ ದೇಗುಲವಿರಬೇಕು.

ಈ ಆಕ್ಷೇಪಣೆಗೆ ಕೆಲವು ಪ್ರತಿ ಆಕ್ಷೇಪಣೆಗಳನ್ನು ಜನ ಸಾಮಾನ್ಯರು ಮಾಡುತ್ತಾರೆ..

(ಅ) ಕಲ್ಲು, ಇಟ್ಟಿಗೆ, ಗಾರೆ, ಮಣ್ಣು, ಸಿಮೆಂಟು ಇತ್ಯಾದಿಗಳಿಂದ ಮಂದಿರ ಕಟ್ಟಬಹುದು. ಲಾಭದ ಅಂಶ ಹೆಚ್ಚಾದರೆ ಮಂದಿರ ಬಿದ್ದೇ ಬೀಳುತ್ತದೆ, ಕೆಡವಿ ಹಾಕುವ ಅಗತ್ಯವಿಲ್ಲ.

ಆದರೆ ತೃಷ್ಣೆ (ಕಾಮ ಕ್ರೋಧ etc.) ತುಂಬಿದ ಮನಸ್ಸು ಅವನದು ಅವನಿಗೇ ಕಾಣುವುದಿಲ್ಲ. ಅಲ್ಲಿ ದೇಗುಲ ಇದೆ ಎಂದು ಹೇಳಿದರ ಆಯಿತೇ ? ಹೊತ್ತಿ ಉರಿಯುವ ಆಶೆಗಳ ಚಿತೆ ಅಲ್ಲಿ ತುಂಬಿರಲು.... ಬೇಡ.

2. ಅಲ್ಲಿ ಒಂದು ಸರ್ವ ಧರ್ಮ ಸಂಕೀರ್ಣ ಕಟ್ಟಬೇಕು.

ಹಾಗೆಂದವರು ಎಲ್ಲ ಮಂದಿರಗಳಲ್ಲೂ (ಪೂಜಾ, ಪ್ರಾರ್ಥನಾ ಮತ್ತು etc.) ಸರ್ವ ಧರ್ಮ ಸಂಕೀರ್ಣ ಕಟ್ಟಲು ಹೇಳಿ ಒಪ್ಪಿಸಬಲ್ಲರೇ ? ತಮ್ಮ Sub ಜಾತಿಯ Sub ವಿಭೇದಗಳ ಎಲ್ಲರೊಡನೆ ಬೆರೆಯಬಲ್ಲರೇ ? ತಮ್ಮ....

ಇನ್ನೊಂದು ತರಹ ಹೋಗೋಣ. ದೈವ ವಿರೋಧಿಯಾದ ಕಮ್ಯುನಿಸ್ಟ್ ರಾಷ್ಟ್ರಗಳಲ್ಲೇ ಈಗ ಮತೀಯ ಸ್ವಾತಂತ್ರ್ಯ ಕೊಟ್ಟಿದ್ದಾರೆ. ನಮ್ಮಲ್ಲಿ ಕೆಲವರಿಗೆ ಅದು ಉಂಟು. ಕೆಲವರಿಗೆ ಬೇಡ ಎನ್ನುವ ನೀತಿಯನ್ನು ಅವರು ತಾಳಿರುವರೇ ?

ಶ್ರೀ ರಾಮನು ಆಚರಿಸಿದ ಧರ್ಮವನ್ನು ಹೀಗೆನ್ನುವ ಎಷ್ಟು ಜನ ಆಚರಿಸುತ್ತಿದ್ದಾರೆ. ಅವನು ಖರ. ದೂಷಣ. ತ್ರಿಶಿರ. ರಾವಣ, ಕುಂಭಕರ್ಣರನ್ನು ಸಂಹರಿಸಲಿಲ್ಲವೇ. ಸೀತೆಯನ್ನು ಕರೆದು ತರಲಿಲ್ಲವೇ ? ಅದು ಈ ಜನಕ್ಕೆ ಮರೆತು ಹೋಯಿತೇ ?

ಸುದ್ದಿಯನ್ನು ತಿರುಚಿ ಬರೆದರೆ ಜನಗಳಿಗೆ ನಿಜ ತಿಳಿಯುವುದಿಲ್ಲವೇ ?

3. ಭಾರತಕ್ಕೆ ಒಂದೇ ಸಿವಿಲ್ ಕೋಡ್ ತರುವುದು ಸಾಧ್ಯವಿಲ್ಲದಿದ್ದರೆ, ಜಾತ್ಯತೀತತೆ, ಧರ್ಮ ನಿರಪೇಕ್ಷತೆಗಳ ಮಾತನ್ನು ನಿಲ್ಲಿಸುವುದೂ ಸಾಧ್ಯವಿಲ್ಲವೇ ?

ನಮ್ಮ ಸರಕಾರವಿದೆ ಅಥವಾ ನಾವೇ ಸರಕಾರ ರಚಿಸಲಿದ್ದೇವೆ. ಆದ್ದರಿಂದ ಒಂದು ಕಣ್ಣಿಗೆ ಸುಣ್ಣ. ಒಂದು ಕಣ್ಣಿಗೆ ಬೆಣ್ಣೆ ಹಾಕುವುದೇ ಸಮಾನತೆ ಎಂದು ನೇರವಾಗಿ ಹೇಳಬಾರದೇಕೆ ?

4. ಸೆಕ್ಯುಲರಿಸಂ ಎಲ್ಲಿದೆ ? ಯಾರಿಗೂ ಬೇಡದ ಈ ತತ್ವವನ್ನು ನಮ್ಮಲ್ಲಿ ಕೆಲವರ ತಲೆಯ ಮೇಲೇ ಏಕೆ ಹೇರಬೇಕು ?


5, ನವೆಂಬರ್ ಏಳರಂದು ಯಾರು ಎಲ್ಲಿರುವರೆಂದು ತಿಳಿದೇ ಬಿಟ್ಟಿತು. ಇದರಲ್ಲಿ ಹೊಸತೇನೂ ಇಲ್ಲ. ಒಂದು ವರ್ಷದಲ್ಲಿ ಎರಡು ಸರ್ಕಾರಗಳುರುಳಿದವು. ಮುಟ್ಟಿದ್ದಕ್ಕೆ.... ಶುಭವಾಗಲಿ.

ನಾವು ಬೇಡಿಕೊಳ್ಳುವುದೇನೆಂದರೆ ನಾವು ಸಾಲದ ಭಾರಕ್ಕೆ ಕುಸಿಯುವುದು ಬೇಡ. ಆವಶ್ಯಕ ವಸ್ತುಗಳ ಅಭಾವ ನಮಗೆ ಬಾರದಿರಲಿ. ಜೀವನ ಭಯ ಗ್ರಸ್ತವಾಗದಿರಲಿ. ಗಲಭೆಗಳಿಂದ ದೂರವಿರಲಿ. ಅದಕ್ಕಾಗಿ ನಮ್ಮ ಪ್ರತಿನಿಧಿಗಳನ್ನು ಆರಿಸಿದ್ದೇವೆ. ಈಗ ಇದೆಲ್ಲಾ ದೊಂಬರಾಟ ಏನು ಎಂದು ತಿಳಿಯುತ್ತಿಲ್ಲ.

ಹಿಂದಿನಿಂದ :

ಭಾರತವು ಸತ್ಯ, ಅಹಿಂಸೆಗಳೆಂಬ ತತ್ವಗಳನ್ನು ಹಿಡಿದು ಸ್ವಾತಂತ್ರ್ಯ ಗಳಿಸಿತು. ಆ ತತ್ವಗಳು ಮರೆತು ಹೋದವೇ ?

ನಾವು ಇನ್ನೂ ಆ ತತ್ವಗಳ ಕನಸನ್ನೇ ಕಾಣುತ್ತಿದ್ದೇವೆ. ಕನಸು ನನಸಾದೀತೇ ?



"ಇಲ್ಲಿರೋ ಅವಶೇಷ ನೋಡಿದ್ರೆ, ದ್ರಾವಿಡರ ಪಂಜುರ್ಲಿ ಭೂತದ ಗುಡೀ ಮೇಲೆ, ಆರ್ಯರು ರಾಮ ಮಂದಿರ ಕಟ್ಟಿರೋ ಹಾಗೆ ಕಾಣುತ್ತೆ ರೋಬಟ್".

REGISTERED No. BGW-180

Printed by V R NATH for the Publisher M SHIVA KUMAR, Published and owned by M SHIVA KUMAR, 36, 6th Main Road, Malleswaram, Bangalore-560 003 Printed at IMPRESSIONS 404, Sampige Road, Malleswaram, Bangalore-560 003 Editor M SHIVA KUMAR